॥ ಶ್ರೀ ॥

ಸತ್ಯನಾರಾಯಣ

ವ್ರತ-ಕಥಾ

Ph : 26770826, 25928136
VANDANA BOOK HOUSE
Dealers Books

ಪ್ರಕಾಶಕರು :

ಮೆ॥ ಶ್ರೀನಿವಾಸಾಚಾರ್ಯ ಹೊಂಬಾಳಿ & ಸನ್

ಬುಕ್ ಸೇಲರ್ಸ

ಸ್ಟೇಶನ್ ರೋಡ, ಗದಗ - 582 101

ಜಿ : ಗದಗ ರಾ : ಕರ್ನಾಟಕ

ಪ್ರಕಾಶಕರು :

ಮೆ॥ ಶ್ರೀನಿವಾಸಾಚಾರ್ಯ ಹೊಂಬಾಳಿ & ಸನ್

ಬುಕ್ ಸೇಲರ್ಸ

ಸ್ಟೇಶನ್ ರೋಡ, ಗದಗ - 582 101

ಮುದ್ರಕರು :

ಹೊಂಬಾಳಿ ಬಂಧುಗಳು

ಸ್ಟೇಶನ್ ರೋಡ, ಗದಗ - 582 101

॥ ಶ್ರೀ ಸತ್ಯನಾರಾಯಣವ್ರತಂ ॥

ಅಥ ಶ್ರೀಸತ್ಯನಾರಾಯಣವ್ರತ ವಿಧಿಃ ॥ ಏತದ್ ವ್ರತಂ ಪೌರ್ಣಮಾ ಅಮಾವಾಸ್ಯಾಷ್ಟಮೀ ದ್ವಾದಶೀ ರವಿ ಚಂದ್ರ ಭೌಮ ಭೃಗು ವ್ಯತೀಪಾತ ಸಂಕ್ರಾಂತ್ಯಾದಿ ಸೂರ್ಯ ಪರ್ವದಿನೇ ಚಂದ್ರಾನುಕೂಲ್ಯೇ ಬ್ರಾಹ್ಮಣ ಮುಖೋಕ್ತ ಪರ್ವಸು ವಾ ಸತ್ಯನಾರಾಯಣವ್ರತಂ ಕುರ್ಯಾತ್ ॥

ತಚ್ಚೇತ್ಥಂ - ತದ್ದಿನೇ ಪ್ರಾತಃ ನದ್ಯಾಂ ಸಪತ್ನೀಕೋ ಯಜಮಾನಃ ಸ್ನಾತ್ವಾ, ತಾಮ್ರಮಯಂ ಅವ್ರಣಂ ಜಲಪೂರಿತಕಲಶಂ ಗೃಹಮಾನೀಯ ಉಚ್ಚಸ್ಥಾನೇ ಯೋಜಯೇತ್ ॥

ತದನಂತರಂ ಸಂಧ್ಯಾದಿಕಂ ನಿರ್ವರ್ತ್ಯ ಮನಸಾ ವ್ರತಮುದ್ದಿಶ್ಯ ಸಾಯಂಕಾಲೇ ಸರ್ವಸಾಮಗ್ರೀಂ ಸಂಪಾದ್ಯ ತದುತ್ತರಂ ಪತ್ನ್ಯಾ ಸಹ ತಿಲಾಮಲಕ ಕಲ್ಕೇನ ಸುಗಂಧತೈಲಾಭ್ಯಾಂ ಅಂಗಂ ವಿಲಿಪ್ಯ ಉಷ್ಣೋದಕೇನ ಸ್ನಾತ್ವಾ, ಪಟ್ಟದುಕೂಲಾದಿವಸ್ತ್ರೋಪವಸ್ತ್ರಾದೀನ್ ಸರ್ವಾಲಂಕಾರಾಂಶ್ಚ ಯಥಾವಿಭವಂ ಧಾರಯೇತ್॥ ಕುಂಕುಮೇನಾರ್ಚಿತ ರಂಗವಲ್ಯಾದ್ಯಲಂಕೃತ ಪೀಠೋಪರಿ ಸಪತ್ನೀಕ ಉಪವಿಶ್ಯ, ಆಚಮ್ಯ ಪವಿತ್ರಪಾಣಿಃ ಪ್ರಾಣಾನಾಯಮ್ಯ ಕುಲದೇವತಾಂ ಮಾತಾಪಿತರೌ ಬ್ರಾಹ್ಮಣಾಂಶ್ಚ ನಮಸ್ಕೃತ್ಯ ಶ್ರೀಸತ್ಯನಾರಾಯಣ ಪೂಜಾಂ ಕುರ್ಯಾತ್ ॥

ಶ್ರೀಸತ್ಯನಾರಾಯಣನ ವ್ರತವನ್ನು ಮಾಡತಕ್ಕವರು ಸಕಲ ಇಷ್ಟಾರ್ಥ ಸಿದ್ಧಿಗಾಗಿ ಈ ವ್ರತವನ್ನು ಮಾಡುವೆನೆಂದು ಸಂಕಲ್ಪಮಾಡಿ, ಮೊದಲು ಗಣಪತಿ ಪೂಜಾ, ಕಲಶಪೂಜಾ, ನವಗ್ರಹಪೂಜಾ ಮತ್ತು ಅಷ್ಟದಿಕ್ಪಾಲಕ ದೇವತಾಪೂಜೆಗಳನ್ನು ಮಾಡಿ, ನಂತರ ಬೊಗಸೆಯಲ್ಲಿ ಅಕ್ಷತೆ, ಹೂ, ತುಳಸಿಯನ್ನು ಹಿಡಿದುಕೊಂಡು ''ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ'' ಎಂಬ ಮುಂತಾದ ಧ್ಯಾನ-ಶ್ಲೋಕಗಳಿಂದ ಧ್ಯಾನ, ಆವಾಹನ, ಆಸನ, ಮುಂತಾದ ಹದಿನಾರು ಉಪಚಾರಗಳಿಂದ ಶ್ರೀಸತ್ಯನಾರಾಯಣನನ್ನು ಪೂಜಿಸಬೇಕು.

ಈ ಸತ್ಯನಾರಾಯಣ ವ್ರತವನ್ನು ಹುಣ್ಣಿವೆ ಅಮಾವಾಸ್ಯಾ ಅಷ್ಟಮೀ ದ್ವಾದಶೀ ತಿಥಿಗಳಲ್ಲಿಯೂ, ರವಿ, ಚಂದ್ರ, ಮಂಗಳವಾರ ಗಳಲ್ಲಿಯೂ, ವ್ಯತೀಪಾತ ಸಂಕ್ರಾಂತಿಸೂರ್ಯ ಪರ್ವದಲ್ಲಿಯೂ, ಚಂದ್ರಾನುಕೂಲ್ಯದಲ್ಲಿಯೂ ಬ್ರಾಹ್ಮಣರು ಹೇಳಿದ ಮುಹೂರ್ತದಲ್ಲೂ ಶ್ರೀಸತ್ಯನಾರಾಯಣನ ವ್ರತವನ್ನು ಮಾಡಬೇಕು. ಅದು ಹೀಗೆ— ಆ ದಿನ ಪ್ರಾತಃಕಾಲದಲ್ಲಿ ಯಜಮಾನನು ಪತ್ನೀ ಸಮೇತನಾಗಿ ನದಿಯಲ್ಲಿ ಮಿಂದು, ಸ್ವಚ್ಛವಾದ ತುಂಬಿದ ತಾಮ್ರದ ಕಲಶವನ್ನು ಮನೆಗೆ ತಂದು ಪೂಜಾಪೀಠದಲ್ಲಿಡಬೇಕು. ಆಮೇಲೆ ನಿತ್ಯಾಹ್ನಿಕವನ್ನು ಮಾಡಿ, ವ್ರತ ಮಾಡುವುದಕ್ಕೆಂದೇ ಸರ್ವ ಸಾಮಗ್ರಿಗಳನ್ನು ಕೂಡಿಸಿ, ಆಮೇಲೆ ಸಪತ್ನೀಕನಾಗಿ ಸುಗಂಧದ್ರವ್ಯಗಳಿಂದ ಪೂಸಿ, ಬಿಸಿನೀರಿನಿಂದ ಸ್ನಾನ ಮಾಡಿ, ಪೀತಾಂಬರಾದಿಗಳನ್ನುಟ್ಟುಕೊಂಡು ಯೋಗ್ಯತಾನುಸಾರವಾಗಿ ಎಲ್ಲ ಅಲಂಕಾರಗಳನ್ನೂ ಇಟ್ಟುಕೊಳ್ಳಬೇಕು. ಕುಂಕುಮ ರಂಗವಲ್ಯಾದಿ ಗಳಿಂದ ಅಲಂಕೃತವಾದ ಪೀಠದಲ್ಲಿ ಸಪತ್ನೀಕನಾಗಿ ಕುಳಿತುಕೊಂಡು ಆಚಮನ ಮಾಡಿ, ಪವಿತ್ರ ಪಾಣಿಯಾಗಿ ಪ್ರಾಣಾಯಾಮವನ್ನು ಮಾಡಿ, ಕುಲದೇವತೆಯನ್ನೂ, ತಾಯಿ ತಂದೆಗಳನ್ನೂ, ಬ್ರಾಹ್ಮಣರನ್ನೂ ನಮಿಸಿ, ಶ್ರೀಸತ್ಯನಾರಾಯಣನ ಪೂಜೆಯನ್ನು ಮಾಡಬೇಕು.

ಪೂಜಾ ಸಾಹಿತ್ಯಗಳು— ಅರಿಸಿನ, ಕುಂಕುಮ, ಗುಲಾಲು, ರಂಗೋಲಿ, ಊದಿನಕಡ್ಡಿ, ಕರ್ಪೂರ, ವೀಳ್ಯದಎಲೆ, ಅಡಿಕೆಬೆಟ್ಟ, ತೆಂಗಿನಕಾಯಿ, ಉತ್ತತ್ತಿ, ಖೊಬ್ಬರಿಬಟ್ಟಲು, ಬೆಲ್ಲ ಅಥವಾ ಸಕ್ಕರೆ, ಕರಿಕೆ-ಪತ್ರಿ, ಹೂ, ತುಲಸಿ, ಮಾವಿನ ತಳಿರು, ಬಾಳೇಕಂಬ, ಒಂದು ಮಂಟಪ.

ಪಂಚಾಮೃತ ಸಾಮಾನುಗಳು— ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ, ತಾಮ್ರದ ತಂಬಿಗೆ, ಥಾಲಿ, ಸವಟು, ತಾಬಾಣ, ಗಂಧ, ಅಕ್ಷತೆ, ಅಕ್ಕಿ, ಘಂಟೆ, ದೇವರ ಪ್ರತಿಮೆ, ವಸ್ತ್ರ, ಯಜ್ಞೋಪವೀತ.

ಪ್ರಸಾದ ಸಾಹಿತ್ಯ— ಗೋಧೀರವೆ, ಸಕ್ಕರೆ, ತುಪ್ಪ, ಹಾಲು, ಬಾಳೆಹಣ್ಣು.

|| ಶ್ರೀ ಸತ್ಯನಾರಾಯಣಾಯ ನಮಃ ||

|| ಅಥ ಶ್ರೀಸತ್ಯನಾರಾಯಣವ್ರತಂ ||

ಅಥ ಪೂಜಾ— ಆಚಮ್ಯ|| ಕೇಶವ, ನಾರಾಯಣ, ಮಾಧವ....೨೪ || ಓಂ ಪ್ರಣವಸ್ಯ ಪರಬ್ರಹ್ಮ....|| ಶುಭಾಭ್ಯಾಂ ಶುಭೇ ಶೋಭನೇ ಮುಹೂರ್ತೇ......... ಶುಭ ಪುಣ್ಯತಿಥೌ ಮಮ ಆತ್ಮನಃ ಶ್ರುತಿ-ಸ್ಮೃತಿ ಪುರಾಣೋಕ್ತ ಫಲಪ್ರಾಪ್ತ್ಯರ್ಥಂ, ಅಮುಕ ಗೋತ್ರೋ ಅಮುಕ ಶರ್ಮಾಽಹಂ ಅಸ್ಮಾಕಂ ಸರ್ವೇಷಾಂ ಸಕುಟುಂಬಾನಾಂ ಸಮಸ್ತದುರಿತೋಪಶಾಂತ್ಯರ್ಥಂ ಅಲಕ್ಷ್ಮೀ ಪರಿಹಾರಪೂರ್ವಕಂ, ಲಕ್ಷ್ಮೀಪ್ರಾಪ್ತ್ಯಾದಿ ಮನೋಭಿಲಷಿತ ಕಾಮನಾ ಸಿದ್ಧಿದ್ವಾರಾ, ಇಹಾಮುತ್ರ ಚ ಸಕಲ ಭೋಗಾದಿ ಚತುರ್ವಿಧ ಪುರುಷಾರ್ಥ ಸಿದ್ಧ್ಯರ್ಥಂ, ಅಂಗೀಕೃತ ಸತ್ಯನಾರಾಯಣ ವ್ರತಾಂಗತ್ವೇನ ಸಂಪಾದಿತ ಸಾಮಗ್ರ್ಯಾ, ಸೂರ್ಯಾದಿ ನವಗ್ರಹ ಇಂದ್ರಾದ್ಯಷ್ಟ ಲೋಕಪಾಲ ಗಣಪತ್ಯಾದಿ ಚತುಷ್ಟಯ ದೇವತಾಪೂಜನ ಪೂರ್ವಕಂ, ಶ್ರೀಸತ್ಯನಾರಾಯಣ ಪ್ರೀತ್ಯರ್ಥಂ, ಯಥಾಶಕ್ತ್ಯಾ ಯಥಾಮಿಲಿತೋಪಚಾರದ್ರವ್ಯೈಃ ಪುರುಷಸೂಕ್ತ, ಶ್ರೀಸೂಕ್ತ ಪುರಾಣೋಕ್ತ ಮಂತ್ರೈಶ್ಚ ಧ್ಯಾನಾವಾಹನಾದಿ ಷೋಡಶೋಪಚಾರೈಃ ಸತ್ಯನಾರಾಯಣ ಪೂಜನಂ ತದ್ವ್ರತೋಕ್ತ ಕಥಾಶ್ರವಣಂ ಚ ಕರಿಷ್ಯೇ ||

ಆಸನವಿಧಿಂ ಶರೀರಶುದ್ಧ್ಯರ್ಥಂ ನ್ಯಾಸಾಂಶ್ಚ ತದನಂತರಂ ಗಣಪತಿಪೂಜನಂ ಕಲಶಪೂಜನಂ ಶಂಖ-ಘಂಟಾರ್ಚನಂ ಕರಿಷ್ಯೇ॥ ಆಸನವಿಧಿಂ ನ್ಯಾಸಾಂಶ್ಚ ಕೃತ್ವಾ, ಆದೌ ನಿರ್ವಿಘ್ನತಾಸಿದ್ಧ್ಯರ್ಥಂ ಮಹಾಗಣಪತಿ ಪೂಜಾಂ ಕರಿಷ್ಯೇ ॥

ಗಣಾನಾಂತ್ವಾ ಶೌನಕೋ ಗೃತ್ಸಮದೋ ಗಣಪತಿರ್ಜಗತೀ ಗಣಪತ್ಯಾವಾಹನೇ ವಿನಿಯೋಗಃ ॥

ಓಂ ಗಣಾನಾಂತ್ವಾಗಣಪತಿಂಹವಾಮಹೇಕವಿಂಕವೀನಾಮುಪಮಶ್ರವಸ್ತಮಂ ।

ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ ಆನಃಶೃಣ್ವನ್ನೂತಿಭಿಃ ಸೀದಸಾದನಂ॥

ಓಂ ಭೂಃ ಗಣಪತಿಂ ಆವಾಹಯಾಮಿ । ಓಂ ಭುವಃ ಗಣಪತಿಂ ಆವಾಹಯಾಮಿ । ಓಂ ಸ್ವಃ ಗಣಪತಿಂ ಆವಾಹಯಾಮಿ ॥

ಓಂ ಭೂರ್ಭುವಃಸ್ವಃ ಮಹಾಗಣಪತಯೇ ನಮಃ ಧ್ಯಾಯಾಮಿ । ಧ್ಯಾನಂ ಸಮರ್ಪಯಾಮಿ ॥

ಓಂ ಭೂರ್ಭುವಃಸ್ವಃ ಮಹಾಗಣಪತಯೇನಮಃ ಆಸನಂ ಸಮ..॥

ಓಂ ಭೂರ್ಭುವಃಸ್ವಃ ಮಹಾಗಣಪತಯೇನಮಃ ಪಾದ್ಯಂ ಸಮರ್ಪಯಾಮಿ। ಇತಿ ಷೋಡಶೋಪಚಾರಪೂಜಾಂ ಕೃತ್ವಾ ॥

ಓಂ ನಿಷುಸೀದ ಗಣಪತೇ ಗಣೇಷು ತ್ವಾಮಾಹುರ್ವಿಪ್ರತಮಂ ಕವೀನಾಂ ।

ನಋತೇತ್ವತ್ಕ್ರಿಯತೇಕಿಂಚನಾರೇ ಮಹಾಮರ್ಕಂಮಘವಂಚಿತ್ರಮರ್ಚ ॥

ಓಂ ಭೂರ್ಭುವಃಸ್ವಃ ಮಹಾಗಣಪತಯೇ ನಮಃ ಮಂತ್ರಪುಷ್ಪಂ ಸ....॥ ಪ್ರದಕ್ಷಿಣ ನಮಸ್ಕಾರಾನ್ ಸ.....। ಛತ್ರಂ ಸ.....। ಚಾಮರಂ ಸ......। ನೃತ್ಯಂ ಸ..... । ಗೀತಂ ಸ.....। ವಾದ್ಯಂ ಸ..... । ಸರ್ವರಾಜೋಪಚಾರಾನ್ ಸಮರ್ಪಯಾಮಿ ॥

ಅಥ ಪ್ರಾರ್ಥನಾ -

ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ ।
ನಿರ್ವಿಘ್ನಂ ಕುರು ಮೇ ದೇವ ಸರ್ವಕಾರ್ಯೇಷು ಸರ್ವದಾ ॥

ಓಂ ಭೂರ್ಭುವಸ್ಸ್ವಃ ಮಹಾಗಣಪತಯೇ ನಮಃ ಪ್ರಾರ್ಥನಾಂ ಸ ....॥

ಅನೇನ ಕೃತ ಪೂಜನೇನ ಸಕಲವಿಘ್ನಹರ್ತ್ರ್ಯಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀವಿಶ್ವಂಭರಃ ಪ್ರೀಯತಾಂ ॥ (ದೇವಸ್ಯ ವಾಮಭಾಗೇ ದೀಪಸ್ಥಾಪನಂ ಕರಿಷ್ಯೇ)

ಓಂ ಅಗ್ನಿನಾಗ್ನಿಃ ಸಮಿಧ್ಯತೇ ಕವಿರ್ಗೃಹಪತಿರ್ಯುವಾ ।
ಹವ್ಯವಾಡ್ ಜುಹ್ವಾಸ್ಯಃ ॥ ಇತಿ ದೀಪಂ ಪ್ರಜ್ವಾಲ್ಯ ॥

ಅಥ ರಂಗವಲ್ಯಾದಿವೇಷ್ಟಿತ ಪೀಠೇ ಕುಂಕುಮೇನ ಅಷ್ಟದಲ ಪದ್ಮಂ ಕೃತ್ವಾ, ತದುಪರಿ ಜಲಪೂರಿತಂ ಪ್ರಾತರಾನೀತಂ ಕಲಶಂ ಸಂಸ್ಥಾಪಯೇತ್ ॥ ತಚ್ಚೇತ್ಥಂ-

ಓಂ ಮಹೀದ್ಯೌಃ ಪೃಥಿವೀ ಚನ ಇಮಂ ಯಜ್ಞಂ ಮಿಮಿಕ್ಷತಾಂ ।
ಪಿಪೃತಾಂನೋ ಭರೀಮಭಿಃ ॥ ಇತಿ ಮಂತ್ರೇಣ ಭೂಮಿಂ ಪ್ರಾರ್ಥ್ಯ॥

ಓಂ ಓಷಧಯಃ ಸಂವದಂತೇ ಸೋಮೇನ ಸಹ ರಾಜ್ಞಾ ।
ಯಸ್ಮೈಕೃಣೋತಿ ಬ್ರಾಹ್ಮಣಸ್ತಂ ರಾಜನ್ಪಾರಯಾಮಸಿ ॥

ಇತಿ ಪೀಠೋಪರಿಕೃತ ಅಷ್ಟದಲಪದ್ಮೇ ಗೋಧೂಮಾದಿ ಧಾನ್ಯರಾಶಿಂ ಕೃತ್ವಾ ॥

ಧ್ಯುರುಶಂಸಮಾನ ಆಯುಃ ಪ್ರಮೋಷೀಃ ॥

ಇತಿ ಕಲಶೇ ವರುಣಮಾವಾಹ್ಯ ॥

ಓಂ ಭೂರ್ಭುವಃಸ್ವಃ ವರುಣಾಯ ನಮಃ ಚಂದನಂ ಸಮರ್ಪಯಾಮಿ । ಓಂ ಭೂರ್ಭುವಃಸ್ವಃ ವರುಣಾಯ ನಮಃ ಅಕ್ಷತಾನ್ ಸಮರ್ಪಯಾಮಿ । ಓಂ ಭೂರ್ಭುವಃಸ್ವಃ ವರುಣಾಯ ನಮಃ ಹರಿದ್ರಾ-ಕುಂಕುಮಂ ಸಮರ್ಪಯಾಮಿ ॥ ಇತಿ ನಾಮ-ಮಂತ್ರೇಣ ವರುಣಪೂಜಾ ಕಾರ್ಯಾ ॥

ಓಂ ಅವತೇಹೇಳೋವರುಣ ನಮೋಭಿರವಯಜ್ಞೇಭಿರೀಮಹೇಹವಿರ್ಭಿಃ ।
ಕ್ಷಯಂನಸ್ಮಭ್ಯಮಸುರಪ್ರಚೇತಾ ರಾಜನ್ನೇನಾಂಸಿ ಶಿಶ್ರಥಃಕೃತಾನಿ ॥

ವರುಣಾಯ ನಮಃ ಮಂತ್ರಪುಷ್ಪಂ ಸ ....। ಪ್ರದಕ್ಷಿಣ ನಮಸ್ಕಾರಾನ್ ಸ .... ॥ ಅನಯಾ ಪೂಜಯಾ ಭಗವಾನ್ ಶ್ರೀಮಹಾವರುಣಾಂತರ್ಗತ ಶ್ರೀ ಲಕ್ಷ್ಮೀ ನಾರಾಯಣಃ ಪ್ರೀಯತಾಂ ॥ ವರುಣಪೂಜಾ ನಂತರಂ—

ಅಥ ಕಲಶಪೂಜಾ—

ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರಃ ಸಮಾಶ್ರಿತಃ ।
ಮೂಲೇತತ್ರಸ್ಥಿತೋ ಬ್ರಹ್ಮಾ ಮಧ್ಯೇ ಮಾತೃಗಣಾಃಸ್ಮೃತಾಃ ॥
ಕುಕ್ಷೌತು ಸಾಗರಾಃ ಸರ್ವೇ ಸಪ್ತದ್ವೀಪಾ ವಸುಂಧರಾಃ ।
ಋಗ್ವೇದೋಽಥ ಯಜುರ್ವೇದಃ ಸಾಮವೇದೋ ಹ್ಯಥರ್ವಣಃ ॥
ಅಂಗೈಶ್ಚಸಹಿತಾಃಸರ್ವೇ ಕಲಶಂತು ಸಮಾಶ್ರಿತಾಃ ।

ಅತ್ರ ಗಾಯತ್ರೀ ಸಾವಿತ್ರೀ ಶಾಂತಿಃಪುಷ್ಟಿಕರೀತಥಾ ॥
ಆಯಾಂತು ದೇವ ಪೂಜಾರ್ಥಂ ಅಭಿಷೇಕಾರ್ಥಮಾದರಾತ್ ।
ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ ॥
ನರ್ಮದೇ ಸಿಂಧು ಕಾವೇರಿ ಜಲೇಽಸ್ಮಿನ್ ಸನ್ನಿಧಿಂ ಕುರು ।
ಸರ್ವೇ ಸಮುದ್ರಾಃ ಸರಿತಸ್ತೀರ್ಥಾನಿ ಜಲದಾನದಾಃ ॥
ಆಯಾಂತು ದೇವಪೂಜಾರ್ಥಂ ಅಭಿಷೇಕಾಯಸಿದ್ಧಯೇ ॥

ಓಂ ಸಿತಾಸಿತೇಸರಿತೇಯತ್ರ ಸಂಗಥೇತತ್ರಾಪ್ಲು ತಾಸೋದಿವಮುತ್ಪತಂತಿ ।
ಯೇವೈತನ್ವಂ ೧ ವಿಸೃಜಂತಿಧೀರಾಸ್ತೇ ಜನಾಸೋ ಅಮೃತತ್ವಂಭಜಂತೇ ॥
ಕಲಶದೇವತಾಭ್ಯೋ ನಮಃ ಸಕಲಪೂಜಾರ್ಥೇ ಅಕ್ಷತಾನ್ ಸ ....॥

ಅಥ ಶಂಖಪೂಜಾ—

ಶಂಖಂ ಚಂದ್ರಾರ್ಕದೈವತ್ಯಂ ಮಧ್ಯೇ ವರುಣದೈವತಂ ।
ಪೃಷ್ಠೇ ಪ್ರಜಾಪತಿಂ ವಿಂದ್ಯಾದಗ್ರೇ ಗಂಗಾಸರಸ್ವತೀ ॥
ತ್ವಂ ಪುರಾ ಸಾಗರೋತ್ಪನ್ನೋ ವಿಷ್ಣುನಾವಿಧೃತಃಕರೇ ।
ನಮಿತಃ ಸರ್ವದೇವೈಶ್ಚ ಪಾಂಚಜನ್ಯ ನಮೋಸ್ತು ತೇ ॥

ಓಂ ಪಾಂಚಜನ್ಯಾಯ ವಿದ್ಮಹೇ ಪಾವಮಾನಾಯ ಧೀಮಹಿ ।
ತನ್ನಃ ಶಂಖಃ ಪ್ರಚೋದಯಾತ್ ॥

ಶಂಖದೇವತಾಭ್ಯೋ ನಮಃ ॥ ಸಕಲಪೂಜಾರ್ಥೇ ಅಕ್ಷತಾನ್ ಸ..... ॥

ಅಥ ಘಂಟಾರ್ಚನಂ—

ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಂ ।
ಕುರು ಘಂಟಾರವಂ ತತ್ರ ದೇವತಾಹ್ವಾನಲಾಂಛನಂ ॥
ಅಜ್ಞಾನಾಜ್ಞಾನತೋ ವಾಪಿ ಕಾಂಸ್ಯಘಂಟಾಂ ನ ವಾದಯೇತ್ ।
ರಾಕ್ಷಸಾನಾಂ ಪಿಶಾಚಾನಾಂ ತದ್ದೇಶೇ ವಸತಿರ್ಭವೇತ್ ।
ತಸ್ಮಾತ್ ಸರ್ವಪ್ರಯತ್ನೇನ ಘಂಟಾನಾದಂ ಚ ಕಾರಯೇತ್ ॥
ಘಂಟಾಗ್ರೇ ಬ್ರಹ್ಮದೈವತ್ಯಂ ಮುಕುಟೇ ರುದ್ರದೇವತಾ ।
ನಾದೇ ಸರಸ್ವತೀಂ ಚೈವ ನಾಲೇ ನಾಗಾಧಿದೈವತಂ ॥

ಘಂಟಾದೇವತಾಭ್ಯೋ ನಮಃ ॥ ಸಕಲಪೂಜಾರ್ಥೇ ಅಕ್ಷತಾನ್ ಸ .... ॥

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ ।
ಯಃ ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ ॥
(ಶಂಖೋದಕೇನ ಆತ್ಮಾನಂ ಪೂಜಾದ್ರವ್ಯಾಣಿ ಚ ಪ್ರೋಕ್ಷ್ಯ)

ತದಂಗ ನವಗ್ರಹಪೂಜನಂ ಕರಿಷ್ಯೇ ॥

ಆಕೃಷ್ಣೇನಾಂಗಿರಸೋ ಹಿರಣ್ಯಸ್ತೂಪಃ । ಸವಿತಾ ತ್ರಿಷ್ಟುಪ್ ।
ಸೂರ್ಯಾವಾಹನೇ ವಿನಿಯೋಗಃ ॥

ಓಂ ಆಕೃಷ್ಣೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂ ಚ ।
ಹಿರಣ್ಯಯೇನ ಸವಿತಾರಥೇನಾ ದೇವೋ ಯಾತಿ ಭುವನಾನಿ ಪಶ್ಯನ್ ॥

ಭೂರ್ಭುವಃಸ್ವಃ ಸೂರ್ಯಾಯನಮಃ ಸೂರ್ಯಂ ಆವಾಹಯಾಮಿ ॥೧॥

ಆಪ್ಯಾಯಸ್ವಸಮೇತಿ ಗೌತಮಃ ಸೋಮೋ ಗಾಯತ್ರೀ ಚಂದ್ರಾವಾಹನೇ ವಿನಿಯೋಗಃ ॥

ಓಂ ಆಪ್ಯಾಯ ಸ್ವಸಮೇತುತೇ ವಿಶ್ವತಃ ಸೋಮವೃಷ್ಣ್ಯಂ ।

ಭವಾ ವಾಜಸ್ಯ ಸಂಗಥೇ ॥

ಭೂರ್ಭುವಃಸ್ವಃ ಚಂದ್ರಾಯನಮಃ ಚಂದ್ರಂ ಆವಾಹಯಾಮಿ ॥ ೨ ॥

ಅಗ್ನಿರ್ಮೂರ್ಧಾ ವಿರೂಪೋಽಂಗಾರಕೋ ಗಾಯತ್ರೀ ಅಂಗಾರಕಾವಾಹನೇ ವಿನಿಯೋಗಃ ॥

ಓಂ ಅಗ್ನಿರ್ಮೂರ್ಧಾ ದಿವಃಕಕುತ್ಪತಿಃ ಪೃಥಿವ್ಯಾ ಅಯಂ ।

ಅಪಾಂರೇತಾಂಸಿ ಜಿನ್ವತಿ ॥

ಭೂರ್ಭುವಃಸ್ವಃ ಅಂಗಾರಕಾಯನಮಃ ಅಂಗಾರಕಂ ಆವಾಹಯಾಮಿ ॥ ೩ ॥

ಉದ್ಬುಧ್ಯಧ್ವಂ ಸೌಮ್ಯೋ ಬುಧೋ ಬುಧಸ್ತ್ರಿಷ್ಟುಪ್ । ಬುಧಾವಾಹನೇ ವಿನಿಯೋಗಃ ॥

ಓಂ ಉದ್ಬುಧ್ಯಧ್ವಂ ಸಮನಸಃ ಸಖಾಯಃ ಸಮಗ್ನಿಮಿಂಧ್ವಂ ಬಹವಃ ಸನೀಳಾಃ।

ದಧಿಕ್ರಾಮಗ್ನಿ ಮುಷಸಂಚ ದೇವೀ ಮಿಂದ್ರಾವತೋಽವಸೇನಿಹ್ವಯೇವಃ ॥

ಭೂರ್ಭುವಃಸ್ವಃ ಬುಧಾಯನಮಃ ಬುಧಂ ಆವಾಹಯಾಮಿ ।೪॥

ಬೃಹಸ್ಪತೇ ಗೃತ್ಸಮದೋ ಬೃಹಸ್ಪತಿಸ್ತ್ರಿಷ್ಟುಪ್ । ಬೃಹಸ್ಪತ್ಯಾವಾಹನೇ ವಿನಿಯೋಗಃ ॥

ಓಂ ಬೃಹಸ್ಪತೇ ಅತಿಯದರ್ಯೋ ಅರ್ಹಾದ್ದ್ಯುಮದ್ವಿಭಾತಿ ಕ್ರತುಮಜ್ಜನೇಷು।

ಯದ್ದೀದಯಚ್ಛವಸ ಋತಪ್ರಜಾತ ತದಸ್ಮಾಸು ದ್ರವಿಣಂ ಧೇಹಿ ಚಿತ್ರಂ ॥

ಭೂರ್ಭುವಃಸ್ವಃ ಬೃಹಸ್ಪತಯೇನಮಃ ಬೃಹಸ್ಪತಿಂ ಆವಾಹಯಾಮಿ ॥ ೫ ॥

ಶುಕ್ರಂತೇ ಭರದ್ವಾಜಃ ಶುಕ್ರಸ್ತ್ರಿಷ್ಟುಪ್ । ಶುಕ್ರಾವಾಹನೇ ವಿನಿಯೋಗಃ ॥

ಓಂ ಶುಕ್ರಂತೇ ಅನ್ಯದ್ಯಜತಂತೇ ಅನ್ಯದ್ವಿಷುರೂಪೇಅಹನೀದ್ಯೌರಿವಾಸಿ ।

ವಿಶ್ವಾಹಿಮಾಯಾಅವಸಿ ಸ್ವಧಾವೋಭದ್ರಾತೇ ಪೂಷನ್ನಿಹರಾತಿರಸ್ತು ॥

ಭೂರ್ಭುವಃಸ್ವಃ ಶುಕ್ರಾಯ ನಮಃ ಶುಕ್ರಂ ಆವಾಹಯಾಮಿ ॥ ೬ ॥

ಶಮಗ್ನಿ ರಿರಿಂಬಿರಿಃ ಶನೈಶ್ಚರ ಉಷ್ಣಿಕ್ । ಶನೈಶ್ಚರಾವಾಹನೇ ವಿನಿಯೋಗಃ ॥

ಓಂ ಶಮಗ್ನಿರಗ್ನಿಭಿಃ ಕರಚ್ಛಂನಸ್ತಪತು ಸೂರ್ಯಃ ।

ಶಂ ವಾತೋ ವಾತ್ವರಪಾ ಅಪಸ್ರಿಧಃ ॥

ಭೂರ್ಭುವಃಸ್ವಃ ಶನೈಶ್ಚರಾಯ ನಮಃ ಶನೈಶ್ಚರಂ ಆ..... ॥ ೭ ॥

ಕಯಾನೋ ವಾಮದೇವೋ ರಾಹುರ್ಗಾಯತ್ರೀ । ರಾಹ್ವಾವಾಹನೇ ವಿನಿಯೋಗಃ ॥

ಓಂ ಕಯಾನಶ್ಚಿತ್ರ ಆಭುವದೂತೀ ಸದಾವೃಧಃ ಸಖಾ ।

ಕಯಾ ಶಚಿಷ್ಠಯಾ ವೃತಾ ॥

ಭೂರ್ಭುವಃಸ್ವಃ ರಾಹವೇ ನಮಃ ರಾಹುಂ ಆವಾಹಯಾಮಿ ।೮॥

ಕೇತುಂ ಕೃಣ್ವನ್ನಧುಚ್ಛಂದಾಃ । ಕೇತುರ್ಗಾಯತ್ರೀ । ಕೇತ್ವಾವಾಹನೇ ವಿನಿಯೋಗಃ ॥

ಓಂ ಕೇತುಂ ಕೃಣ್ವನ್ನ ಕೇತವೇ ಪೇಶೋ ಮರ್ಯಾ ಅಪೇಶಸೇ ।

ಸಮುಷದ್ಭಿರಜಾಯಥಾಃ ॥

ಭೂರ್ಭುವಃಸ್ವಃ ಕೇತವೇ ನಮಃ ಕೇತುಂ ಆವಾಹಯಾಮಿ ॥೯ ॥

ಅಥ ಅಷ್ಟದಲೇಷು— ಇಂದ್ರಾಯ ನಮಃ । ಅಗ್ನಯೇನಮಃ । ಯಮಾಯ ನಮಃ । ನಿರ್ಋತಯೇ ನಮಃ। ವರುಣಾಯ ನಮಃ । ವಾಯವೇ ನಮಃ । ಸೋಮಾಯ ನಮಃ । ಈಶಾನಾಯ ನಮಃ ।

ಚತುರ್ದಲೇಷು- ಗಣಪತಯೇ ನಮಃ । ದುರ್ಗಾಯೈ ನಮಃ । ಕ್ಷೇತ್ರಪಾಲಾಯ ನಮಃ । ವಾಸ್ತೋಷ್ಪತಯೇ ನಮಃ ॥

ರವ್ಯಾದಿ ನವಗ್ರಹ ದೇವತಾಭ್ಯೋ ನಮಃ ಧ್ಯಾಯಾಮಿ । ಧ್ಯಾನಂ ಸಮರ್ಪಯಾಮಿ ॥

ರವ್ಯಾದಿ ನವಗ್ರಹ ದೇವತಾಭ್ಯೋ ನಮಃ ಆವಾಹಯಾಮಿ। ಆವಾಹನಂ ಸಮರ್ಪಯಾಮಿ ॥

ಇತಿ ನಾಮಮಂತ್ರೇಣ ಷೋಡಶೋಪಚಾರೈಃ ಸಂಪೂಜ್ಯ ॥

ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪಃಪೂಜಾ ಕ್ರಿಯಾದಿಷು ನ್ಯೂನಂ ಸಂ..... ಅನಯಾ ಪೂಜಯಾ ರವ್ಯಾದಿ ನವಗ್ರಹದೇವತಾಃ ಪ್ರೀಯಂತಾಂ ॥ ಇತಿ ನವಗ್ರಹದೇವತಾ ಸ್ಥಾಪನಂ ತತ್ಪೂಜನಂ ಚ ಕೃತ್ವಾ, ಮಧ್ಯೇ ಸಂಪೂಜಿತ ಪೀಠೇ ಅಷ್ಟಶಕ್ತಿ ಶ್ರೀಲಕ್ಷ್ಮೀಸಹಿತ ಶ್ರೀಸತ್ಯನಾರಾಯಣಾಯ ನಮಃ ಶ್ರೀಸತ್ಯನಾರಾಯಣಂ ಆವಾಹಯಾಮಿ ॥

ಅಥ ಧ್ಯಾನಂ-

ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ ।
ವಿಶ್ವಾಧಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಂ ॥
ಲಕ್ಷ್ಮೀಕಾಂತಂ ಕಮಲನಯನಂ ಯೋಗಿಭಿರ್ಧ್ಯಾನಗಮ್ಯಂ ।
ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಂ ॥

ಓಂ ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಲಂ ।
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಂ ನಮೋ ನಮಃ ॥
ಧ್ಯಾಯೇತ್ಸತ್ಯಂ ಗುಣಾತೀತಂ ಗುಣತ್ರಯಸಮನ್ವಿತಂ ।
ಲೋಕನಾಥಂ ತ್ರಿಲೋಕೇಶಂ ಕೌಸ್ತುಭಾಭರಣಂ ಹರಿಂ ॥೧॥

ನೀಲವರ್ಣಂ ಪೀತವಾಸಂ ಶ್ರೀವತ್ಸ ಪದಭೂಷಿತಂ ।
ಗೋವಿಂದಂ ಗೋಕುಲಾನಂದಂ ಬ್ರಹ್ಮಾದ್ಯೈರಪಿ ಪೂಜಿತಂ ॥೨॥

ಅಂಜಲೌ ಪುಷ್ಪಂ ಗೃಹೀತ್ವಾ ಹೃದಿಸ್ಥಂ ದೇವಂ ಶ್ವಾಸಮಾರ್ಗೇಣ ಪುಷ್ಪೇ ಆಗತಂ ಧ್ಯಾತ್ವಾ ॥

ಓಂ ಸಹಸ್ರಶೀರ್ಷಾ ಪು...॥ ಹಿರಣ್ಯವರ್ಣಾಂ ಹರಿಣೀಂ...॥
ಆಗಚ್ಛ ದೇವದೇವೇಶ ತೇಜೋರಾಶೇ ಜಗತ್ಪತೇ ।
ಕ್ರಿಯಮಾಣಾಂ ಮಯಾ ಪೂಜಾಂ ಗೃಹಾಣ ಸುರಸತ್ತಮ ॥

ಶ್ರೀಲಕ್ಷ್ಮೀ ಸಹಿತ ಶ್ರೀಸತ್ಯನಾರಾಯಣಾಯ ಸಾಂಗಾಯ ಸಪರಿವಾರಾಯ ಸಾಯುಧಾಯ ಸಶಕ್ತಿಕಾಯ ನಮಃ ॥ ಶ್ರೀಲಕ್ಷ್ಮೀಸಹಿತ ಶ್ರೀಸತ್ಯನಾರಾಯಣಂ ಸಾಂಗಂ ಸಪರಿವಾರಂ ಸಾಯುಧಂ ಸಶಕ್ತಿಕಂ ಆವಾಹಯಾಮಿ ॥ (ಇತಿ ಪುಷ್ಪಂ ಸಮರ್ಪಯೇತ್) ॥೧॥

ಪುರುಷಏವೇದಂ...|| ತಾಂಮಆವಹಜಾತವೇದೋ...||
ನಾನಾರತ್ನ ಸಮಾಯುಕ್ತಂ ಕಾರ್ತಸ್ವರವಿಭೂಷಿತಂ |
ಆಸನಂ ದೇವದೇವೇಶ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ||
ಶ್ರೀ ಸತ್ಯನಾರಾಯಣಾಯನಮಃ ಆಸನಂ ಸಮರ್ಪಯಾಮಿ |೨||

ಏತಾವಾನಸ್ಯ...|| ಅಶ್ವಪೂರ್ವಾಂ...||
ಗಂಗಾದಿಸರ್ವತೀರ್ಥೇಭ್ಯೋ ಮಯಾ ಪಾದ್ಯಾರ್ಥಮಾಹೃತಂ|
ತೋಯಮೇತತ್ ಸುಖಸ್ಪರ್ಶಂ ಪಾದ್ಯಾರ್ಥಂ ಪ್ರತಿಗೃಹ್ಯತಾಂ||
ಶ್ರೀಸತ್ಯನಾರಾಯಣಾಯ ನಮಃ ಪಾದಯೋಃ ಪಾದ್ಯಂ ಸ... ||೩||

ತ್ರಿಪಾದೂರ್ಧ್ವ...|| ಕಾಂಸೋಽಸ್ಮಿತಾಂ...||
ನಮಸ್ತೇ ದೇವದೇವೇಶ ನಮಸ್ತೇ ಧರಣೀಧರ |
ನಮಸ್ತೇ ಕಮಲಾಕಾಂತ ಗೃಹಾಣಾರ್ಘ್ಯಂ ನಮೋಽಸ್ತು ತೇ ||
ಶ್ರೀ ಸತ್ಯನಾರಾಯಣಾಯ ನಮಃ ಅರ್ಘ್ಯಂ ಸಮ.... ||೪||

ತಸ್ಮಾದ್ವಿರಾಳಜಾಯತ...|| ಚಂದ್ರಾಂ ಪ್ರಭಾಸಾಂ...||
ಕರ್ಪೂರವಾಸಿತಂ ತೋಯಂ ಮಂದಾಕಿನ್ಯಾಃ ಸಮಾಹೃತಂ |
ಆಚಮ್ಯತಾಂ ಜಗನ್ನಾಥ ಮಯಾ ದತ್ತಂ ಹಿ ಭಕ್ತಿತಃ ||
ಶ್ರೀಸತ್ಯನಾರಾಯಣಾಯ ನಮಃ ಆಚಮನೀಯಂ ಸಮ...||೫||

ಯತ್ಪುರುಷೇಣ...|| ಆದಿತ್ಯವರ್ಣೇ...||
ಗಂಗಾ ಚ ಯಮುನಾ ಚೈವ ನರ್ಮದಾ ಚ ಸರಸ್ವತೀ |
ತಾಪೀ ಪಯೋಷ್ಣೀ ರೇವಾ ಚ ತಾಭ್ಯಃ ಸ್ನಾನಾರ್ಥಮಾಹೃತಂ ||
ಶ್ರೀಸತ್ಯನಾರಾಯಣಾಯ ನಮಃ ಮಲಾಪಕರ್ಷಸ್ನಾನಂ
ಸ........||೬||

ಅಥ ಪಂಚಾಮೃತಸ್ನಾನಂ-

ಓಂ ಆಪ್ಯಾಯ ಸ್ವ ಸಮೇತುತೇ ವಿಶ್ವತಃ ಸೋಮವೃಷ್ಣ್ಯಂ ।

ಭವಾ ವಾಜಸ್ಯ ಸಂಗಥೇ ॥

ಸುರಭೇಸ್ತು ಸಮುತ್ಪನ್ನಂ ದೇವಾನಾಮಪಿ ದುರ್ಲಭಂ ।
ಪಯೋ ದದಾಮಿ ದೇವೇಶ ಸ್ನಾನಾರ್ಥಂ ಪ್ರತಿಗೃಹ್ಯತಾಂ ॥
ಶ್ರೀಸತ್ಯನಾರಾಯಣಾಯನಮಃ ಪಯಃಸ್ನಾನಂ ಸಮರ್ಪಯಾಮಿ॥
ಪಯಃ ಸ್ನಾನಾನಂತರಂ ಶುದ್ಧೋದಕಸ್ನಾನಂ ಸ...॥
ಸಕಲಪೂಜಾರ್ಥೇ ಅಕ್ಷತಾನ್ ಸಮರ್ಪಯಾಮಿ ॥೧॥

ಓಂ ದಧಿಕ್ರಾವ್ಣೋ ಅಕಾರಿಷಂ ಜಿಷ್ಣೋ ರಶ್ವಸ್ಯ ವಾಜಿನಃ ।

ಸುರಭಿ ನೋ ಮುಖಾಕರತ್ಪ್ರಣ ಆಯೂಂಷಿ ತಾರಿಷತ್ ॥

ಚಂದ್ರಮಂಡಲಸಂಕಾಶಂ ಸರ್ವದೇವಪ್ರಿಯಂ ಹಿ ಯತ್ ।
ದಧಿ ದದಾಮಿ ದೇವೇಶ ಸ್ನಾನಾರ್ಥಂ ಪ್ರತಿಗೃಹ್ಯತಾಂ ॥
ಶ್ರೀಸತ್ಯನಾರಾಯಣಾಯ ನಮಃ ದಧಿಸ್ನಾನಂ ಸಮ...॥
ದಧಿ ಸ್ನಾನಾನಂತರಂ ಶುದ್ಧೋದಕ ಸ್ನಾನಂ ಸ......॥
ಸಕಲಪೂಜಾರ್ಥೇ ಅಕ್ಷತಾನ್ ಸಮರ್ಪಯಾಮಿ ॥೨॥

ಓಂ ಘೃತಂಮಿಮಿಕ್ಷೇಘೃತಮಸ್ಯಯೋನಿರ್ಘೃತೇಶ್ರಿತೋಘೃತಮ್ವಸ್ಯಧಾಮ।

ಅನುಷ್ವಧಮಾವಹಮಾದಯಸ್ವಸ್ವಾಹಾಕೃತಂವೃಷಭವಕ್ಷಿಹವ್ಯಂ ॥

ಆಜ್ಯಂ ಸುರಾಣಾಮಾಹಾರಮಾಜ್ಯಂ ಯಜ್ಞೇ ಪ್ರತಿಷ್ಠಿತಂ ।
ಆಜ್ಯಂ ಪವಿತ್ರಂ ಪರಮಂ ಸ್ನಾನಾರ್ಥಂ ಪ್ರತಿಗೃಹ್ಯತಾಂ ॥

ಶ್ರೀಸತ್ಯನಾರಾಯಣಾಯ ನಮಃ ಘೃತಸ್ನಾನಂ ಸ...॥
ತದನಂತರಂ ಶುದ್ಧೋದಕಸ್ನಾನಂ ಸ... ॥
ಸಕಲಪೂಜಾರ್ಥೇ ಅಕ್ಷತಾನ್ ಸಮರ್ಪಯಾಮಿ ॥೩॥

ಓಂ ಮಧುವಾತಾ ಋತಾಯತೇ ಮಧುಕ್ಷರಂತಿ ಸಿಂಧವಃ ।

ಮಾಧ್ವೀರ್ನಃ ಸಂತ್ವೋಷಧೀಃ ।

ಮಧುನಕ್ತ ಮುತೋಷಸೋ ಮಧುಮತ್ ಪಾರ್ಥಿವಂ ರಜಃ ।

ಮಧುದ್ಯೌರಸ್ತು ನಃ ಪಿತಾ ॥

ಮಧುಮಾನ್ನೋವನಸ್ಪತಿರ್ಮಧುಮಾಃ ಅಸ್ತು ಸೂರ್ಯಃ ।

ಮಾಧ್ವೀರ್ಗಾವೋ ಭವಂತು ನಃ ॥

ಸರ್ವೌಷಧಿ ಸಮುತ್ಪನ್ನಂ ಪೀಯೂಷಸದೃಶಂ ಮಧು ।
ಸ್ನಾನಾರ್ಥಂ ತೇ ಮಯಾ ದತ್ತಂ ಗೃಹಾಣ ಪರಮೇಶ್ವರ ॥
ಶ್ರೀಸತ್ಯನಾರಾಯಣಾಯ ನಮಃ ಮಧುಸ್ನಾನಂ ಸ...॥
ಮಧುಸ್ನಾನಾನಂತರಂ ಶುದ್ಧೋದಕಸ್ನಾನಂ ಸ...॥
ಸಕಲಪೂಜಾರ್ಥೇ ಅಕ್ಷತಾನ್ ಸಮರ್ಪಯಾಮಿ ।೪॥

ಓಂ ಸ್ವಾದುಃಪವಸ್ವದಿವ್ಯಾಯಜನ್ಮನೇಸ್ವಾದುರಿಂದ್ರಾಯಸುಹವೀತುನಾಮ್ನೇ।

ಸ್ವಾದುರ್ಮಿತ್ರಾಯವರುಣಾಯವಾಯವೇಬೃಹಸ್ಪತಯೇಮಧುಮಾಃಅದಾಭ್ಯಃ॥

ಇಕ್ಷುದಂಡಾತ್ ಸಮುತ್ಪನ್ನಾ ರಸ್ಯಾ ಸ್ನಿಗ್ಧತರಾ ಶುಭಾ ।
ಶರ್ಕರೇಯಂ ಮಯಾ ದತ್ತಾ ಸ್ನಾನಾರ್ಥಂ ಪ್ರತಿಗೃಹ್ಯತಾಂ ॥

ಶ್ರೀಸತ್ಯನಾರಾಯಣಾಯ ನಮಃ ಶರ್ಕರಾಸ್ನಾನಂ ಸ...॥
ತದನಂತರಂ ಶುದ್ಧೋದಕಸ್ನಾನಂ ಸ...॥
ಸಕಲಪೂಜಾರ್ಥೇ ಅಕ್ಷತಾನ್ ಸಮರ್ಪಯಾಮಿ ॥ ೫ ॥

ಯಾಃ ಫಲಿನೀರ್ಯಾ ಅಫಲಾ ಅಪುಷ್ಪಾಯಾಶ್ಚ ಪುಷ್ಪಿಣೀಃ ।
ಬೃಹಸ್ಪತಿಪ್ರಸೂತಾ ಸ್ತಾನೋ ಮುಂಚಂತ್ವಂ ಹಸಃ ॥

ಖರ್ಜೂರಜಂಬುಕದಲೀಪನಸಾಮ್ರಪಕ್ವಪೂಗೀಕಪಿತ್ಥ ಬದರೀ ಜಮುದಂಬರಾಣಿ । ಧಾತ್ರೀಫಲಾನಿ ರುಚಿರಾಣಿ ಮನೋಹರಾಣಿ ಭಕ್ತ್ಯಾ ನಿರಂತರಮಹಂ ಸ್ನಪಯಾಮಿ ವಿಷ್ಣೋ ॥

ಶ್ರೀಸತ್ಯನಾರಾಯಣಾಯ ನಮಃ ಫಲಸ್ನಾನಂ ಸ...॥
ತದನಂತರಂ ಶುದ್ಧೋದಕ ಸ್ನಾನಂ ಸ...॥
ಸಕಲಪೂಜಾರ್ಥೇ ಅಕ್ಷತಾನ್ ಸಮರ್ಪಯಾಮಿ ॥ ೬ ॥

ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಂ ।
ಈಶ್ವರೀಂ ಸರ್ವಭೂತಾನಾಂ ತಾಮಿ ಹೋಪಹ್ವಯೇ ಶ್ರಿಯಂ ॥
ಹರಿಚಂದನ ಸಂಭೂತಂ ಹರಿಪ್ರೀತೇಶ್ಚ ಗೌರವಾತ್ ।
ಸುರಭಿಪ್ರಿಯ ಗೋವಿಂದ ಗಂಧಂ ಸ್ನಾನಾಯ ಗೃಹ್ಯತಾಂ ॥

ಶ್ರೀಸತ್ಯನಾರಾಯಣಾಯ ನಮಃ ಗಂಧೋದಕ ಸ್ನಾನಂ ಸ...॥
ತದನಂತರಂ ಶುದ್ಧೋದಕ ಸ್ನಾನಂ ಸ...॥
ಸಕಲಪೂಜಾರ್ಥೇ ಅಕ್ಷತಾನ್ ಸಮರ್ಪಯಾಮಿ ॥ ೭ ॥

ಕನಿಕ್ರದಜ್ಜನುಷಂಪ್ರಬ್ರುವಾಣಇಯರ್ತಿವಾಚಮರಿತೇವನಾವಂ ।
ಸುಮಂಗಲಶ್ಚಶಕುನೇಭವಾಸಿಮಾತ್ವಾಕಾಚಿದಭಿಭಾವಿಶ್ವ್ಯಾವಿದತ್ ॥
ಅಭ್ಯಂಗಾರ್ಥಂ ಮಹೀಪಾಲ ತೈಲಂ ಪುಷ್ಪಾದಿಸಂಭವಂ ।
ಸುಗಂಧದ್ರವ್ಯಸಮ್ಮಿಶ್ರಂ ಸಂಗ್ರಹಾಣ ಜಗತ್ಪತೇ ॥
ಶ್ರೀಸತ್ಯನಾರಾಯಣಾಯ ನಮಃ ಅಭ್ಯಂಗಸ್ನಾನಂ ಸ...॥

ಅಂಗೋದ್ವರ್ತನಕಂ ದೇವ ಕಸ್ತೂರ್ಯಾದಿವಿಮಿಶ್ರಿತಂ ॥
ಲೇಪನಾರ್ಥಂ ಗೃಹಾಣೇದಂ ಹರಿದ್ರಾಕುಂಕುಮೈರ್ಯುತಂ ॥
ಶ್ರೀಸತ್ಯನಾರಾಯಣಾಯ ನಮಃ ಅಂಗೋದ್ವರ್ತನಂ ಸ..॥

ನಾನಾತೀರ್ಥಾದಾಹೃತಂ ಚ ತೋಯಮುಷ್ಣಂ ಮಯಾ ಕೃತಂ ।
ಸ್ನಾನಾರ್ಥಂ ತೇ ಪ್ರಯಚ್ಛಾಮಿ ಸ್ವೀಕುರುಷ್ವ ದಯಾನಿಧೇ ॥
ಶ್ರೀಸತ್ಯನಾರಾಯಣಾಯ ನಮಃ ಉಷ್ಣೋದಕ ಸ್ನಾನಂ ಸ ...॥

ಓಂ ಆಪೋ ಹಿಷ್ಠಾ ಮಯೋ.......ಜನಯಥಾ ಚ ನಃ ॥
ಶ್ರೀಸತ್ಯನಾರಾಯಣಾಯ ನಮಃ ಶುದ್ಧೋದಕಸ್ನಾನಂ ಸ... ॥

(ಶ್ರೀಸತ್ಯನಾರಾಯಣಾಯ ನಮಃ ಇತಿ ನಾಮ ಮಂತ್ರೇಣ ಗಂಧಾದಿ ಮಂತ್ರಪುಷ್ಪಾಕ್ಷತೈರುಪಚಾರೈಃ ಪೂರ್ವ ಪೂಜಾಂ ಕೃತ್ವಾ, ನಿರ್ಮಾಲ್ಯಂ ಉತ್ತರೇ ವಿಸೃಜ್ಯ, ಪುರುಷಸೂಕ್ತ ಶ್ರೀಸೂಕ್ತಾಭ್ಯಾಂ ಮಹಾಭಿಷೇಕಃ ಕಾರ್ಯಃ)

ಅಥ ಮಹಾಭಿಷೇಕಃ— ಹರಿಃ ಓಂ ಸಹಸ್ರ ಶೀರ್ಷಾ....|| ಹಿರಣ್ಯವರ್ಣಾಂ ಹರಿಣೀಂ ....|| ಅತೋ ದೇವಾ ಅವಂತು ನೋ...|| ಶ್ರೀಸತ್ಯನಾರಾಯಣಾಯ ನಮಃ ಮಹಾಭಿಷೇಕಂ ಸ...|| ಸ್ನಾನಾನಂತರಂ ಆಚಮನೀಯಂ ಸಮರ್ಪಯಾಮಿ ||

"**ಓಂ ನಮೋ ನಾರಾಯಣಾಯ**" ಇತಿ ದ್ವಾದಶವಾರಂ **ಜಪೇತ್** ||

ತದಸ್ತು ಮಿತ್ರಾವರುಣಾ ತದಗ್ನೇ ಶಂ ಯೋರಸ್ಮಭ್ಯ ಮಿದಮಸ್ತು ಶಸ್ತಂ |
ಅಶೀಮಹಿಗಾಧಮುತಪ್ರತಿಷ್ಠಾಂ ನಮೋದಿವೇಬೃಹತೇ ಸಾದನಾಯ ||
ಅಸುನೀತೇಪುನರಸ್ಮಾಸುಚಕ್ಷುಃ ಪುನಃ ಪ್ರಾಣಮಿಹನೋಧೇಹಿಭೋಗಂ |
ಜ್ಯೋಕ್ಪಶ್ಯೇಮಸೂರ್ಯಮುಚ್ಚರಂತಮನುಮತೇ ಮೃಳಯಾನಃಸ್ವಸ್ತಿ ||

ಗೃಹಾವೈ ಪ್ರತಿಷ್ಠಾಸೂಕ್ತಂ ತತ್ಪ್ರತಿಷ್ಠಿತತಮಯಾ ವಾಚಾ ಶಂಸ್ತವ್ಯಂ ತಸ್ಮಾದ್ಯದ್ಯಪಿ ದೂರಇವ ಪಶೂಂಲ್ಲಭತೇ ಗೃಹಾನೇವೈ ನಾನಾಜಿಗಮಿಷತಿ ಗೃಹಾಹಿ ಪಶೂನಾಂ ಪ್ರತಿಷ್ಠಾ ಪ್ರತಿಷ್ಠಾ ||

ಶ್ರೀಸತ್ಯನಾರಾಯಣಾಯ ಸಾಂಗಾಯ ಸಪರಿವಾರಾಯ ಸಾಯುಧಾಯ ಸಶಕ್ತಿಕಾಯ ನಮಃ || ಶ್ರೀಸತ್ಯನಾರಾಯಣಂ ಸಾಂಗಂ ಸಪರಿವಾರಂ ಸಾಯುಧಂ ಸಶಕ್ತಿಕಂ ಆವಾಹಯಾಮಿ ||

ಶ್ರೀಲಕ್ಷ್ಮೀಸಹಿತ ಶ್ರೀಸತ್ಯನಾರಾಯಣಾಯ ನಮಃ

ಸುಮುಹೂರ್ತಮಸ್ತು || ಸುಪ್ರತಿಷ್ಠಿತಮಸ್ತು ||

ತಂ ಯಜ್ಞಂ...॥ ಉಪೈತು ಮಾಂ...॥

ತಪ್ತಕಾಂಚನವರ್ಣಾಭೇ ಅನರ್ಘ್ಯೇ ಮೃದುಲೇ ಶುಭೇ ।
ಪಾಹಿ ಮಾಂ ಪುಂಡರೀಕಾಕ್ಷ ವಾಸಸೀ ಪ್ರತಿಗೃಹ್ಯತಾಂ ॥
ಶ್ರೀಸತ್ಯನಾರಾಯಣಾಯ ನಮಃ ವಸ್ತ್ರಯುಗ್ಮಂ ಸ...॥

ನವರತ್ನಾದಿಭಿರ್ಬದ್ಧಾಂ ಸುವರ್ಣೈಶ್ಚೈವ ತಂತುಭಿಃ ।
ನಿರ್ಮಿತಾಂ ಕಂಚುಕೀಂ ಭಕ್ತ್ಯಾ ಗೃಹಾಣ ಪರಮೇಶ್ವರಿ ॥
ಶ್ರೀಮಹಾಲಕ್ಷ್ಮ್ಯೈ ನಮಃ ಕಂಚುಕೀಂ ಸ...॥

ಮಾಂಗಲ್ಯತಂತುಮಣಿಭಿಃ ಮೌಕ್ತಿಕೈಶ್ಚ ವಿರಾಜಿತಂ ।
ಸೌಮಂಗಲ್ಯಾಭಿವೃದ್ಧ್ಯರ್ಥಂ ಕಂಠಸೂತ್ರಂ ದದಾಮಿ ತೇ ॥
ಶ್ರೀಮಹಾಲಕ್ಷ್ಮ್ಯೈ ನಮಃ ಕಂಠಸೂತ್ರಂ ಸ... ॥

ತಾಡಪತ್ರಾಣಿ ದಿವ್ಯಾನಿ ವಿಚಿತ್ರಾಣಿ ಶುಭಾನಿ ಚ ।
ಕರಾಭರಣಯುಕ್ತಾನಿ ಮಾತಸ್ತ್ವಂ ಪ್ರತಿಗೃಹ್ಯತಾಂ ॥
ಶ್ರೀಮಹಾಲಕ್ಷ್ಮ್ಯೈ ನಮಃ ತಾಡಪತ್ರಂ ಸ ... ॥

ಹರಿದ್ರಾ ರಂಜಿತೇ ದೇವಿ ಸುಖ ಸೌಭಾಗ್ಯದಾಯಿನಿ ।
ಹರಿದ್ರಾಂ ತೇ ಪ್ರದಾಸ್ಯಾಮಿ ಗೃಹಾಣ ಪರಮೇಶ್ವರಿ ॥
ಶ್ರೀಮಹಾಲಕ್ಷ್ಮ್ಯೈ ನಮಃ ಹರಿದ್ರಾಂ ಸ ...॥

ಕುಂಕುಮಂ ಕಾಮದಂ ದಿವ್ಯಂ ಕಾಮಿನೀ ಕಾಮಸಂಭವಂ ।
ಕುಂಕುಮೇನಾರ್ಚಿತೇ ದೇವಿ ಸೌಭಾಗ್ಯಂ ದೇಹಿ ಗೃಹ್ಯತಾಂ ॥
ಶ್ರೀಮಹಾಲಕ್ಷ್ಮ್ಯೈ ನಮಃ ಕುಂಕುಮಂ ಸ...॥

ಸುನೀಲಭ್ರಮರಾಭಾಸಂ ಕಜ್ಜಲಂ ನೇತ್ರ ಮಂಡನಂ ।
ಮಯಾ ದತ್ತಮಿದಂ ಭಕ್ತ್ಯಾ ಕಜ್ಜಲಂ ಪ್ರತಿಗೃಹ್ಯತಾಂ ॥
ಶ್ರೀಮಹಾಲಕ್ಷ್ಮ್ಯೈ ನಮಃ ಕಜ್ಜಲಂ ಸ...॥

ವಿದ್ಯುತ್ಕೃಶಾನುಸಂಕಾಶಂ ಜಪಾಕುಸುಮಸನ್ನಿಭಂ ।
ಸಿಂಧೂರಂ ತೇ ಪ್ರದಾಸ್ಯಾಮಿ ಸೌಭಾಗ್ಯಂ ದೇಹಿ ಮೇ ಚಿರಂ ॥
ಶ್ರೀಮಹಾಲಕ್ಷ್ಮ್ಯೈ ನಮಃ ಸಿಂಧೂರಂ ಸ...॥

ಸ್ವಭಾವಸುಂದರಾಂಗಿ ತ್ವಂ ನಾನಾರತ್ನಯುತಾನಿ ಚ ।
ಭೂಷಣಾನಿ ವಿಚಿತ್ರಾಣಿ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ॥
ಶ್ರೀಮಹಾಲಕ್ಷ್ಮ್ಯೈ ನಮಃ ನಾನಾಭರಣಾನಿ ಸ...॥

ನಾನಾಸುಗಂಧಿಕಂ ದ್ರವ್ಯಂ ಚೂರ್ಣೀಕೃತ್ಯ ಪ್ರಯತ್ನತಃ ।
ದದಾಮಿ ತೇ ನಮಸ್ತುಭ್ಯಂ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ॥
ಶ್ರೀಮಹಾಲಕ್ಷ್ಮ್ಯೈ ನಮಃ ನಾನಾಪರಿಮಳದ್ರವ್ಯಂ ಸ...॥

ತಸ್ಮಾದ್ಯಜ್ಞಾತ್ ಸರ್ವಹುತಃ ಸಂಭೃತಂ ...॥ ಕ್ಷುತ್ಪಿಪಾಸಾ....॥
ಬ್ರಹ್ಮವಿಷ್ಣುಮಹೇಶೈಶ್ಚ ನಿರ್ಮಿತಂ ಬ್ರಹ್ಮಸೂತ್ರಕಂ ।
ಯಜ್ಞೋಪವೀತಂ ತದ್ದಾನಾತ್ ಪ್ರೀಯತಾಂ ಕಮಲಾಪತಿಃ ॥
ಶ್ರೀಸತ್ಯನಾರಾಯಣಾಯ ನಮಃ ಯಜ್ಞೋಪವೀತಂ ಸ...॥
ತದನಂತರಂ ಆಚಮನೀಯಂ ಸ...॥

ತಸ್ಮಾದ್ಯಜ್ಞಾತ್ಸರ್ವಹುತ ಋಚಃ....॥ ಗಂಧದ್ವಾರಾಂ ದುರಾ...॥
ಗೋರೋಚನಂ ಚಂದನ ದೇವದಾರು ಕರ್ಪೂರ ಕೃಷ್ಣಾಗರು ನಾಗರಾಣಿ । ಕಸ್ತೂರಿಕಾ ಕೇಸರಮಿಶ್ರಿತಾನಿ ಯಥೋಚಿತಂ ಸತ್ಯ ಮಯಾರ್ಪಿತಾನಿ ॥

ಶ್ರೀಸತ್ಯನಾರಾಯಣಾಯ ನಮಃ ಗಂಧಂ ಸಮರ್ಪಯಾಮಿ ॥

ಶ್ರೀ ಸತ್ಯನಾರಾಯಣಾಯ ನಮಃ ಹಸ್ತಭೂಷಣಂ ಸ...॥

ಅಹಿರಿವಭೋಗೈಃ ಪರ್ಯೇತಿಬಾಹುಂಜ್ಯಾಯಾಹೇತಿಂ ಪರಿಬಾಧಮಾನಃ ।

ಹಸ್ತಘ್ನೋವಿಶ್ವಾವಯುನಾನಿವಿದ್ವಾನ್ಪುಮಾನ್ಪುಮಾಂಸಂ ಪರಿಪಾತುವಿಶ್ವತಃ ॥

ಶ್ರೀಸತ್ಯನಾರಾಯಣಾಯ ನಮಃ ನಾನಾಪರಿಮಳದ್ರವ್ಯಾಣಿ ಸ...॥

ತಸ್ಮಾದಶ್ವಾ ಅಜಾಯಂತ...॥ ಮನಸಃಕಾಮಮಾಕೂತಿಂ...॥

ಶ್ವೇತತಂಡುಲಸಂಯುಕ್ತಾನ್ ಕುಂಕುಮೇನ ವಿರಾಜಿತಾನ್ ।
ಅಕ್ಷತಾನ್ ಗೃಹ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥
ಶ್ರೀಸತ್ಯನಾರಾಯಣಾಯ ನಮಃ ಅಕ್ಷತಾನ್ ಸ...॥

ಸೇವಂತಿಕಾ ಬಕುಲ ಚಂಪಕ ಪಾಟಲಾಬ್ಜೈಃ ಪುನ್ನಾಗಜಾತಿ
ಕರವೀರ ರಸಾಲಪುಷ್ಪೈಃ ।
ಬಿಲ್ವಪ್ರವಾಲ ತುಲಸೀದಲಮಾಲತೀಭಿಃ ತ್ವಾಂ ಪೂಜಯಾಮಿ
ಜಗದೀಶ್ವರ ಮೇ ಪ್ರಸೀದ ॥
ಮಾಲ್ಯಾದೀನಿ ಸುಗಂಧೀನಿ ಮಾಲತ್ಯಾದೀನಿ ವೈ ಪ್ರಭೋ ।
ಮಯಾ ಹೃತಾನಿ ಪೂಜಾರ್ಥಂ ಪುಷ್ಪಾಣಿ ಪ್ರತಿಗೃಹ್ಯತಾಂ ॥
ಜಾತೀಪುಷ್ಪಂ ಚ ಕಲ್ಹಾರಂ ಕಮಲಂ ಕರವೀರಕಂ ।
ಕೇತಕಂ ಬಕುಲಂ ಚೈವ ನಾರಾಯಣ ದದಾಮ್ಯಹಂ ॥
ಶ್ರೀಸತ್ಯನಾರಾಯಣಾಯ ನಮಃ ಪುಷ್ಪಾಣಿ ಸ...॥

ತುಲಸೀ ಕುಂದಮಂದಾರ ಪಾರಿಜಾತಾಂಬುಜೈಸ್ತಥಾ ।
ಪಂಚಭಿಗ್ರ್ರಥಿತಾ ಮಾಲಾ ವೈಜಯಂತೀತಿ ಕಥ್ಯತೇ ॥
ಶ್ರೀಸತ್ಯನಾರಾಯಣಾಯ ನಮಃ ವೈಜಯಂತೀಮಾಲಾಂ ಸ...॥
ಕಟಿಸೂತ್ರಾಂಗುಲಿಯೇ ಚ ಕುಂಡಲೇ ಮುಕುಟಂ ತಥಾ ।
ವನಮಾಲಾಂ ಕೌಸ್ತುಭಂ ಚ ಗೃಹಾಣ ಪುರುಷೋತ್ತಮ ॥
ಶ್ರೀಸತ್ಯನಾರಾಯಣಾಯ ನಮಃ ನಾನಾಲಂಕಾರಾನ್ ಸ.....॥
॥ ಶ್ರೀ ವಿಷ್ಣುಸಹಸ್ರನಾಮಭಿಃ ಸಹಸ್ರ ತುಲಸ್ಯರ್ಪಣಂ ॥

- ಅಥ ಅಂಗಪೂಜಾ -

ಶ್ರೀ ಸತ್ಯಪರಬ್ರಹ್ಮಣೇ ನಮಃ	ಪಾದೌ	ಪೂಜಯಾಮಿ ॥
ಸಂಕರ್ಷಣಾಯ ನಮಃ	ಗುಲ್ಫೌ	ಪೂಜಯಾಮಿ ॥
ಕಾಲಾತ್ಮನೇ ನಮಃ	ಜಾನುನೀ	ಪೂಜಯಾಮಿ ॥
ವಿಶ್ವರೂಪಾಯ ನಮಃ	ಜಂಘೇ	ಪೂಜಯಾಮಿ ॥
ವಿಶ್ವಾಯ ನಮಃ	ಕಟಿಂ	ಪೂಜಯಾಮಿ ॥
ಪದ್ಮನಾಭಾಯ ನಮಃ	ನಾಭಿಂ	ಪೂಜಯಾಮಿ ॥
ಪರಮಾತ್ಮನೇ ನಮಃ	ಹೃದಯಂ	ಪೂಜಯಾಮಿ ॥
ವೈಕುಂಠಾಯ ನಮಃ	ಕಂಠಂ	ಪೂಜಯಾಮಿ ॥
ಸರ್ವಾಸ್ತ್ರಧಾರಿಣೇ ನಮಃ	ಬಾಹೂನ್	ಪೂಜಯಾಮಿ ॥
ವಾಚಸ್ಪತಯೇ ನಮಃ	ಮುಖಂ	ಪೂಜಯಾಮಿ ॥
ಹರಯೇ ನಮಃ	ಜಿಹ್ವಾಂ	ಪೂಜಯಾಮಿ ॥
ದಾಮೋದರಾಯ ನಮಃ	ದಂತಾನ್	ಪೂಜಯಾಮಿ ॥
ಸಹಸ್ರಾಕ್ಷಾಯ ನಮಃ	ನೇತ್ರೇ	ಪೂಜಯಾಮಿ ॥
ಕೇಶವಾಯ ನಮಃ	ಲಲಾಟಂ	ಪೂಜಯಾಮಿ ॥
ಸರ್ವಾತ್ಮನೇ ನಮಃ	ಶಿರಃ	ಪೂಜಯಾಮಿ ॥

ಶ್ರೀಲಕ್ಷ್ಮೀಸಹಿತ ಶ್ರೀಸತ್ಯನಾರಾಯಣಾಯನಮಃ ಸರ್ವಾಂಗಂ ಪೂಜಯಾಮಿ ॥

ಅಥ ಧೂಪಂ- ಓಂ ಯತ್ಪುರುಷಂ ....॥ ಕರ್ದಮೇನ ....॥
ವನಸ್ಪತಿರಸೋದ್ಭೂತೋ ಗಂಧಾಢ್ಯೋ ಗಂಧ ಉತ್ತಮಃ ।
ಆಘ್ರೇಯಃ ಸರ್ವದೇವಾನಾಂ ಧೂಪೋಽಯಂ ಪ್ರತಿಗೃಹ್ಯತಾಂ ॥
ಶ್ರೀಸತ್ಯನಾರಾಯಣಾಯ ನಮಃ ಧೂಪಂ ಸ ....॥

ಅಥ ದೀಪಂ- ಬ್ರಾಹ್ಮಣೋಸ್ಯ....॥ ಆಪಃ ಸೃಜಂತು....॥
ಸಾಜ್ಯಂ ತ್ರಿವರ್ತಿಸಂಯುಕ್ತಂ ವಹ್ನಿನಾ ಯೋಜಿತಂ ಮಯಾ ।
ದೀಪಂ ಗೃಹಾಣ ದೇವೇಶ ತ್ರೈಲೋಕ್ಯ ತಿಮಿರಾಪಹ ॥
ಭಕ್ತ್ಯಾ ದೀಪಂ ಪ್ರಯಚ್ಛಾಮಿ ದೇವಾಯ ಪರಮಾತ್ಮನೇ । ತ್ರಾಹಿ ಮಾಂ ನರಕಾತ್ ಘೋರಾತ್ ದಿವ್ಯಜ್ಯೋತಿರ್ನಮೋಽಸ್ತುತೇ ॥
ಶ್ರೀಸತ್ಯನಾರಾಯಣಾಯ ನಮಃ ದೀಪಂ ಸ....॥

ನೈವೇದ್ಯಂ- ಚಂದ್ರಮಾಮನಸೋ..........॥ ಆರ್ದ್ರಾಂ ಯಃಕರಿಣೀಂ....॥

ರಂಭಾಫಲಂ ಘೃತಂ ಕ್ಷೀರಂ ಗೋಧೂಮಸ್ಯ ಚ ಚೂರ್ಣಕಂ ।
ಶರ್ಕರಾಯುಕ್ತ ನೈವೇದ್ಯಂ ಸಪಾದಂ ಭಕ್ಷ್ಯಮುತ್ತಮಮ್ ॥
ಶ್ರೀಸತ್ಯನಾರಾಯಣಾಯ ನಮಃ ನೈವೇದ್ಯಂ ಸ....॥
ಮಧ್ಯೇ ಪಾನೀಯಂ ಸ....॥ ಉತ್ತರಾಪೋಶನಂ ಸ....॥
ಹಸ್ತಪ್ರಕ್ಷಾಲನಂ ಸ....॥ ಮುಖಪ್ರಕ್ಷಾಲನಂ ಸ....॥
ಕರೋದ್ವರ್ತನಕಂ ದೇವ ಮಯಾ ದತ್ತಂ ಹಿ ಭಕ್ತಿತಃ ।
ಚಾರುಚಂದ್ರ ಪ್ರಭಂ ದಿವ್ಯಂ ಗೃಹಾಣ ಜಗದೀಶ್ವರ ॥
ಶ್ರೀಸತ್ಯನಾರಾಯಣಾಯ ನಮಃ ಕರೋದ್ವರ್ತನಾರ್ಥೇ ಚಂದನಂ ಸ....॥

ಪೂಗೀಫಲಂ ಸಕರ್ಪೂರಂ ನಾಗವಲ್ಲೀದಲೈರ್ಯುತಂ ।
ಏಲಾಲವಂಗ ಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಂ ॥
ಶ್ರೀಸತ್ಯನಾರಾಯಣಾಯ ನಮಃ ಪೂಗೀಫಲತಾಂಬೂಲಂ ಸ....॥

ಹಿರಣ್ಯಗರ್ಭಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।
ಅನಂತಪುಣ್ಯ ಫಲದಮತಃ ಶಾಂತಿಂ ಪ್ರಯಚ್ಛ ಮೇ ॥
ಶ್ರೀಸತ್ಯನಾರಾಯಣಾಯ ನಮಃ ಸುವರ್ಣಪುಷ್ಪದಕ್ಷಿಣಾಂ ಸ....॥

ಇದಂ ಫಲಂ ಮಯಾ ದೇವ ಸ್ಥಾಪಿತಂ ಪುರತಸ್ತವ ।
ತೇನ ಮೇ ಸಕಲಾವಾಪ್ತಿರ್ಭವೇಜ್ಜನ್ಮನಿ ಜನ್ಮನಿ ॥
ಶ್ರೀಸತ್ಯನಾರಾಯಣಾಯ ನಮಃ ಮಹಾಫಲಂ ಸ....॥

ಕೂಷ್ಮಾಂಡಂ ಮಾತುಲಿಂಗಂ ಚ ಕರ್ಕಟೀ ದಾಡಿಮೀ ಫಲಂ।
ರಂಭಾಫಲಂ ನಾರಿಕೇಲಂ ಜಂಬೀರಂ ಬದರೀಂ ತಥಾ ॥
ಶ್ರೀಸತ್ಯನಾರಾಯಣಾಯ ನಮಃ ಫಲಾಷ್ಟಕಂ ಸ....॥

ಶ್ರಿಯೇ ಜಾತಃಶ್ರಿಯ ಆನಿರಿಯಾಯ ಶ್ರಿಯಂ ವಯೋ ಜರಿತೃಭ್ಯೋ ದಧಾತಿ।
ಶ್ರಿಯಂ ವಸಾನಾ ಅಮೃತತ್ವಮಾಯನ್ ಭವಂತಿ ಸತ್ಯಾಸಮಿಥಾ ಮಿತದ್ರೌ ॥

ಶ್ರಿಯಏವೈನಂತಚ್ಛ್ರಿಯಾಮಾದಧಾತಿ ಸಂತತಮೃಚಾವಷಟ್ ಕೃತ್ಯಂ । ಸಂತತ್ಯೈ ಸಂಧೀಯತೇ ಪ್ರಜಯಾ ಪಶುಭಿರ್ಯ ಏವಂ ವೇದ ॥

ಶ್ರೀಸತ್ಯನಾರಾಯಣಾಯ ನಮಃ ಮಹಾನೀರಾಜನದೀಪಂ ಸಮರ್ಪಯಾಮಿ ॥

ಅರ್ಚತ ಪ್ರಾರ್ಚತ ಪ್ರಿಯಮೇಧಾಸೋ ಅರ್ಚತ ।

ಅರ್ಚಂತು ಪುತ್ರಕಾ ಉತ ಪುರಂ ನ ಧೃಷ್ಣವರ್ಚತ ॥

ಕರ್ಪೂರಕಂ ಮಹಾರಾಜ ರಂಭೋದ್ಭೂತಂ ಚ ದೀಪಕಂ ।
ಮಂಗಲಾರ್ಥಂ ಮಹೀಪಾಲ ಸಂಗೃಹಾಣ ಜಗತ್ಪತೇ ॥
ಶ್ರೀಸತ್ಯನಾರಾಯಣಾಯ ನಮಃ ಕರ್ಪೂರದೀಪಂ ಸ....॥

ನಾಭ್ಯಾ ಆಸೀದಂತರಿಕ್ಷಂ...... ॥ ಆರ್ದ್ರಾಂ ಯಃಕರಿಣೀಂ......॥
ಯಾನಿ ಕಾನಿ ಚ ಪಾಪಾನಿ ಜನ್ಮಾಂತರ ಕೃತಾನಿ ಚ ।
ತಾನಿ ತಾನಿ ವಿನಶ್ಯಂತಿ ಪ್ರದಕ್ಷಿಣ ಪದೇ ಪದೇ ॥
ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ ।
ತಸ್ಮಾತ್ ಕಾರುಣ್ಯಭಾವೇನ ರಕ್ಷ ರಕ್ಷ ರಮಾಪತೇ ॥
ಶ್ರೀಸತ್ಯನಾರಾಯಣಾಯ ನಮಃ ಪ್ರದಕ್ಷಿಣಾನ್ ಸ....॥

ಸಪ್ತಾಸ್ಯಾಸನ್ ಪರಿಧಯಃ..॥ ತಾಂ ಮ ಆವಹ ಜಾತವೇದೋ ..॥
ನಮಃ ಸರ್ವಹಿತಾರ್ಥಾಯ ಜಗದಾಧಾರ ಹೇತವೇ ।
ಸಾಷ್ಟಾಂಗೋಽಯಂ ಪ್ರಣಾಮಸ್ತೇ ಪ್ರಯತ್ನೇನ ಮಯಾ ಕೃತಃ ॥
ಉರಸಾ ಶಿರಸಾ ದೃಷ್ಟ್ಯಾ ಮನಸಾ ವಚಸಾ ತಥಾ ।
ಪದ್ಭ್ಯಾಂ ಕರಾಭ್ಯಾಂ ಜಾನುಭ್ಯಾಂ ಪ್ರಣಾಮೋಷ್ಟಾಂಗ ಉಚ್ಯತೇ ॥
ಶಾಠ್ಯೇನಾಪಿ ನಮಸ್ಕಾರಾನ್ ಕುರ್ವತಃ ಶಾರ್ಙ್ಗಪಾಣಯೇ ।
ಶತಜನ್ಮಾರ್ಜಿತಂ ಪಾಪಂ ತತ್ ಕ್ಷಣಾದೇವ ನಶ್ಯತಿ ॥
ಶ್ರೀಸತ್ಯನಾರಾಯಣಾಯ ನಮಃ ನಮಸ್ಕಾರಾನ್ ಸ....॥

ಗೃಹಾಣ ಪರಮೇಶಾನ ಸರತ್ನೇ ಛತ್ರಚಾಮರೇ ।
ದರ್ಪಣಂ ವ್ಯಜನಂ ಚೈವ ರಾಜಭೋಗಾಯ ಯತ್ನತಃ ॥

ಶ್ರೀಸತ್ಯನಾರಾಯಣಾಯ ನಮಃ ಛತ್ರಂ ಸ.... ॥ ಚಾಮರಂ ಸ.... ॥ ಗೀತಂ ಸ.... ॥ ನೃತ್ಯಂ ಸ.... ॥ ವಾದ್ಯಂ ಸ.... ॥ ಸಮಸ್ತರಾಜೋಪಚಾರಾರ್ಥೇ ಅಕ್ಷತಾನ್ ಸ.... ॥

ಯಜ್ಞೇನ ಯಜ್ಞಮಯಜಂತದೇವಾಃ....॥ ಯಃಶುಚಿಃ ಪ್ರಯತೋ....॥

ವಿದ್ಯಾ ಬುದ್ಧಿ ಧನೈಶ್ವರ್ಯ ಪುತ್ರ ಪೌತ್ರಾದಿ ಸಂಪದಃ ।
ಪುಷ್ಪಾಂಜಲಿ ಪ್ರದಾನೇನ ದೇಹಿ ಮೇ ಈಪ್ಸಿತಂ ವರಂ ॥

ನಮೋಽಸ್ತ್ವನಂತಾಯ....॥ ನಮೋ ಮಹದ್ಭ್ಯೋ ನಮೋ....॥ ಕಥಾತೇ ಅಗ್ನೇಶು....ಯಜ್ಞೇನ ಯಜ್ಞ....। ರಾಜಾಧಿರಾಜಾಯ......ಸ್ವಸ್ತಿ ಸಾಮ್ರಾಜ್ಯಂ ಭೌಜ್ಯಂ....॥

ಶ್ರೀಸತ್ಯನಾರಾಯಣಾಯ ನಮಃ ಮಂತ್ರಪುಷ್ಪಂ ಸ.......॥

ಆವಾಹನಂ ನ ಜಾನಾಮಿ ನ ಜಾನಾಮಿ ವಿಸರ್ಜನಂ ।
ಪೂಜಾಂ ಚೈವ ನ ಜಾನಾಮಿ ಕ್ಷಮ್ಯತಾಂ ಪುರುಷೋತ್ತಮ ॥

ಶ್ರೀಸತ್ಯನಾರಾಯಣಾಯ ನಮಃ ಪ್ರಾರ್ಥನಾಂ ಸ........॥

ಯಸ್ಯಸ್ಮೃತ್ಯಾ........ಅನೇನ ಕೃತಪೂಜನೇನ ಶ್ರೀಲಕ್ಷ್ಮೀ ಸಹಿತ ಶ್ರೀಸತ್ಯನಾರಾಯಣಃ ಸಾಂಗಃ ಸಪರಿವಾರಃ ಪ್ರೀಯತಾಂ ॥

॥ ಅಥ ಕಥಾಶ್ರವಣಂ ಕಾರ್ಯಮ್ ॥

॥ ಶ್ರೀ ಸತ್ಯನಾರಾಯಣ ವ್ರತ-ಕಥಾ ಪ್ರಾರಂಭಃ ॥

ಶುಕ್ಲಾಂಬರಧರಂ ದೇವಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥
ಸ್ವಸ್ತ್ಯಸ್ತು ಸತಾಂ ಅಖಿಲಸನ್ಮಂಗಲಾನಿ ಭವಂತು ಶ್ಲೋಕೈಕ
ಶ್ರವಣಪಠಣಮಾತ್ರೇಣ ವಕ್ತುಶ್ಚ ಶ್ರೋತೄಣಾಂ ನಿಖಿಲ
ಕಲಿಕೃತಕಲ್ಮಷಾಪನೋದನ ಪಟುತರೇ ಧರ್ಮಾದ್ಯಖಿಲ
ಪುರುಷಾರ್ಥಸಾಧನೀಭೂತೇ ಸ್ಕಂದಪುರಾಣೇ ರೇವಾಖಂಡೇ
ಶ್ರೀಸತ್ಯನಾರಾಯಣ ಕಥಾ-ಪ್ರಾರಂಭಃ ॥

॥ ಶ್ರೀ ಗುರುಭ್ಯೋ ನಮಃ ॥

ವ್ಯಾಸ ಉವಾಚ—

ಏಕದಾ ನೈಮಿಷಾರಣ್ಯೇ ಋಷಯಃ ಶೌನಕಾದಯಃ ।
ಪಪ್ರಚ್ಛುರ್ಮುನಯಃ ಸರ್ವೇ ಸೂತಂ ಪೌರಾಣಿಕಂ ಖಲು ॥ ೧ ॥
ವ್ರತೇನ ತಪಸಾ ಕಿಂ ವಾ ಪ್ರಾಪ್ಯತೇ ವಾಂಛಿತಂ ಫಲಂ ।
ತತ್ಸರ್ವಂ ಶ್ರೋತುಮಿಚ್ಛಾಮಃ ಕಥಯಸ್ವ ಮಹಾಮುನೇ ॥ ೨ ॥

ಶ್ರೀ ಮಹಾಲಕ್ಷ್ಮೀ ಸಹಿತ ಶ್ರೀ ಸತ್ಯನಾರಾಯಣಾಯ ನಮಃ ॥ ವ್ಯಾಸರು ಹೇಳುತ್ತಾರೆ— ಒಂದು ದಿನ ನೈಮಿಷವೆಂಬ ಅರಣ್ಯದಲ್ಲಿ ವಾಸಿಸುತ್ತಿರುವಂಥ ಶೌನಕ ಮೊದಲಾದ ಯಾವತ್ತೂ ಋಷಿಗಳು ಪುರಾಣಗಳನ್ನು ಹೇಳುವಂಥ ಸೂತರಿಗೆ ಪ್ರಶ್ನೆ ಮಾಡುತ್ತಾರೆ. ॥ ೧ ॥ ಏನೆಂದರೆ, ಎಲೈ ಮಹಾಮುನಿಯಾದ ಸೂತರೇ, ಯಾವ ವ್ರತದಿಂದ ಅಥವಾ ತಪಸ್ಸಿನಿಂದ ಇಚ್ಛಿತವಾದ ಫಲ ಪ್ರಾಪ್ತವಾಗುವದೋ ಅದೆಲ್ಲವನ್ನೂ ಕೇಳುವದಕ್ಕಾಗಿ ಇಚ್ಛಿಸಿರುತ್ತೇವೆ. (ನಮಗೆ ನೀನು)

ಸೂತ ಉವಾಚ—

ನಾರದೇನೈವ ಸಂಪೃಷ್ಟೋ ಭಗವಾನ್ ಕಮಲಾಪತಿಃ ।
ಸುರರ್ಷಯೇ ಯಥೈವಾಹ ತಚ್ಛೃಣುಧ್ವಂ ಸಮಾಹಿತಾಃ ॥ ೩ ॥
ಏಕದಾ ನಾರದೋ ಯೋಗೀ ಪರಾನುಗ್ರಹಕಾಂಕ್ಷಯಾ ।
ಪರ್ಯಟನ್ ವಿವಿಧಾನ್ ಲೋಕಾನ್ ಮರ್ತ್ಯಲೋಕಮುಪಾಗತಃ ॥ ೪ ॥
ತತ್ರದೃಷ್ಟ್ವಾ ಜನಾನ್ ಸರ್ವಾನ್ ನಾನಾಕ್ಲೇಶ ಸಮನ್ವಿತಾನ್ ।
ನಾನಾಯೋನಿ ಸಮುತ್ಪನ್ನಾನ್ ಕ್ಲಿಶ್ಯಮಾನಾನ್ ಸ್ವಕರ್ಮಭಿಃ ॥ ೫ ॥
ಕೇನೋಪಾಯೇನ ಚೈತೇಷಾಂ ದುಃಖನಾಶೋ ಭವೇದ್ಧ್ರುವಂ ।
ಇತಿ ಸಂಚಿಂತ್ಯ ಮನಸಾ ವಿಷ್ಣುಲೋಕಂ ಗತಸ್ತದಾ ॥ ೬ ॥

ಹೇಳು. ॥ ೨ ॥ ಹೀಗೆ ಋಷಿಗಳು ಪ್ರಶ್ನೆ ಮಾಡಲು, ಸೂತರು ಅನ್ನುತ್ತಾರೆ— ಋಷಿಗಳಿರಾ, ನಾರದರಿಂದಲೇ ಕೇಳಲ್ಪಟ್ಟ ಲಕ್ಷ್ಮೀಪತಿಯಾದ ನಾರಾಯಣನು ನಾರದರಿಗೆ ಯಾವ ಪ್ರಕಾರ ವಾಗಿ ಹೇಳಿದನೋ ಅದನ್ನು ಏಕಾಗ್ರ ಚಿತ್ತದಿಂದ ಕೇಳಿರಿ. ।೩॥ ಒಂದುದಿನ ಯೋಗಿಯಾದ ನಾರದರು ಲೋಕಗಳನ್ನೆಲ್ಲ ತಿರುಗಿ ತಿರುಗಿ ಮನುಷ್ಯರಲ್ಲಿ ಅನುಗ್ರಹ ಮಾಡಬೇಕೆಂಬ ಇಚ್ಛೆಯಿಂದ ಭೂಲೋಕಕ್ಕೆ ಬಂದರು. ॥ ೪ ॥ ಅಲ್ಲಿ ಕೆಟ್ಟ ಕೆಟ್ಟ ಕರ್ಮಗಳನ್ನು ಮಾಡಿ, ಆ ಪಾಪವಶಾತ್ ನೀಚಯೋನಿ (ಜನ್ಮ) ಗಳಲ್ಲಿ ಹುಟ್ಟಿ ತಮ್ಮ ತಮ್ಮ ಕರ್ಮಾನುಸಾರ ಅತಿ ದುಃಖದಿಂದ ಬಳಲುತ್ತಿರುವಂಥ ಜನರನ್ನು ನೋಡಿ, ಯಾವ ಉಪಾಯ ದಿಂದ ಈ ಜನರ ದುಃಖವೆಲ್ಲ ನಾಶವಾಗುವದೆಂಬುದಾಗಿ ತಮ್ಮ ಮನಸ್ಸಿನಲ್ಲಿಯೇ ವಿಚಾರಿಸಿ, ಕೂಡಲೇ ವಿಷ್ಣುಲೋಕಕ್ಕೆ ಹೋದರು. ॥ ೫ ॥ ೬ ॥ ಅಲ್ಲಿ ಶುಕ್ಲವರ್ಣನಾಗಿಯೂ

ತತ್ರ ನಾರಾಯಣಂ ದೇವಂ ಶುಕ್ಲವರ್ಣಂ ಚತುರ್ಭುಜಂ ।
ಶಂಖಚಕ್ರಗದಾಪದ್ಮ ವನಮಾಲಾವಿಭೂಷಿತಂ ॥ ೭ ॥
ದೃಷ್ಟ್ವಾ ತಂ ದೇವದೇವೇಶಂ ಸ್ತೋತುಂ ಸಮುಪಚಕ್ರಮೇ ।

ನಾರದ ಉವಾಚ—

ನಮೋ ವಾಙ್ಮನಸಾತೀತ ರೂಪಾಯಾನಂತ ಶಕ್ತಯೇ ॥ ೮ ॥
ಆದಿಮಧ್ಯಾಂತಹೀನಾಯ ನಿರ್ಗುಣಾಯ ಗುಣಾತ್ಮನೇ ।
ಸರ್ವೇಷಾಂ ಆದಿಭೂತಾಯ ಭಕ್ತಾನಾಮಾರ್ತಿನಾಶಿನೇ ॥ ೯ ॥
ಶ್ರುತ್ವಾ ಸ್ತೋತ್ರಂ ತತೋ ವಿಷ್ಣುಃ ನಾರದಂ ಪ್ರತ್ಯಭಾಷತ ।

ನಾಲ್ಕು ಕೈಗಳಿಂದ ಯುಕ್ತನಾಗಿಯೂ ಇದ್ದು, ಆ ನಾಲ್ಕೂ ಕೈಗಳಲ್ಲಿ ಶಂಖ, ಚಕ್ರ, ಗದಾ ಮತ್ತು ಪದ್ಮಗಳನ್ನು ಧರಿಸಿ, ಕೊರಳಲ್ಲಿರುವ ವನಮಾಲೆಯಿಂದ ಶೋಭಿಸುತ್ತಿರುವಂಥ, ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಮನ್ನಾರಾಯಣನನ್ನು ನೋಡಿ, ದೇವತೆಗಳಿಗೆ ಒಡೆಯನಾದ ಆ ಭಗವಂತನನ್ನು ನಾರದರು ಸ್ತುತಿಸಲಾರಂಭಿಸಿದರು. ನಾರದರು ಅನ್ನುತ್ತಾರೆ— ವಚನಗಳಿಗೂ ಮನಸ್ಸಿಗೂ ದೂರ-ನಾದಂಥವನು, ಅನಂತ ಶಕ್ತಿಯುಳ್ಳವನೂ ॥ ೭ ॥ ೮ ॥ ಮತ್ತು ಹುಟ್ಟೋಣ ಬೆಳೆಯೋಣ ಸಾಯೋಣ ಇವುಗಳಿಲ್ಲದವನು, ಸತ್ವಾದಿ ಪ್ರಾಕೃತಗುಣಗಳಿಂದ ರಹಿತನು, ಆನಂದಾದಿ ಗುಣಗಳಿಂದ ಪೂರ್ಣನು, ಯಾವತ್ತರಿಗೂ ನೀನು ಆದಿ ಭೂತನು ಮತ್ತು ನಿನ್ನ ಭಕ್ತರ ದುಃಖಗಳನ್ನೆಲ್ಲ ದೂರಮಾಡುವಂಥ ನಿನಗೆ ನಮಃ ॥ ೯ ॥ ಈ ಬಗೆಯಾಗಿ ಸ್ತುತಿಸುವಂಥ ನಾರದರ ಸ್ತೋತ್ರವನ್ನು

ಶ್ರೀಭಗವಾನ್ ಉವಾಚ—

ಕಿಮರ್ಥಂ ಆಗತೋಽಸಿ ತ್ವಂ ಕಿಂ ತೇ ಮನಸಿ ವರ್ತತೇ ॥ ೧೦ ॥

ಕಥಯಸ್ವ ಮಹಾಭಾಗ ತತ್ಸರ್ವಂ ಕಥಯಾಮಿ ತೇ ।

ನಾರದ ಉವಾಚ—

ಮರ್ತ್ಯಲೋಕೇ ಜನಾಃ ಸರ್ವೇ ನಾನಾಕ್ಲೇಶ ಸಮನ್ವಿತಾಃ ।

ನಾನಾಯೋನಿಸಮುತ್ಪನ್ನಾಃ ಪಚ್ಯಂತೇ ಪಾಪಕರ್ಮಭಿಃ ॥ ೧೧ ॥

ತತ್ಕಥಂ ಶಮಯೇನ್ನಾಥ ಲಘೂಪಾಯೇನ ತದ್ವದ ।

ಶ್ರೋತುಮಿಚ್ಛಾಮಿ ತತ್ಸರ್ವಂ ಕೃಪಾಸ್ತಿ ಯದಿ ತೇ ಮಯಿ ॥ ೧೨ ॥

ಶ್ರೀಭಗವಾನ್ ಉವಾಚ—

ಸಾಧು ಪೃಷ್ಟಂ ತ್ವಯಾ ವತ್ಸ ಲೋಕಾನುಗ್ರಹಕಾಂಕ್ಷಯಾ ।

ಕೇಳಿ, ಭಗವಂತನು ಅನ್ನುತ್ತಾನೆ— ಎಲೈ ನಾರದನೇ! ಇಲ್ಲಿ ನೀನು ಯಾವ ಕಾರಣದಿಂದ ಬಂದಿರುವಿ. ಮತ್ತು ನಿನ್ನ ಮನಸ್ಸಿನಲ್ಲಿ ಏನಿರುವುದು ? ॥ ೧೦ ॥ ಇದನ್ನೆಲ್ಲ ನನಗೆ ತಿಳುಹಿಸು. ಅಂದರೆ ಅದನ್ನೆಲ್ಲ ಸವಿಸ್ತಾರವಾಗಿ ನಿನಗೆ ನಾನು ಹೇಳುವೆನೆಂದೆನಲು ನಾರದರು ಅನ್ನುತ್ತಾರೆ— ಭಗವನ್ ! ಮನುಷ್ಯ ಲೋಕದಲ್ಲಿರುವ ಜನರೆಲ್ಲರೂ ತಮ್ಮ ತಮ್ಮ ಪಾಪಕರ್ಮಗಳಿಂದ ನೀಚ ಯೋನಿಗಳಲ್ಲಿ ಹುಟ್ಟಿ ಬಹುವಿಧವಾಗಿ ದುಃಖಪಡುತ್ತಿರುವರು. ॥ ೧೧ ॥ ಆ ಜನರ ಅಂಥ ದುಃಖವು ಯಾವ ಸುಲಭ ಉಪಾಯದಿಂದ ನಾಶವಾಗುವದೆಂಬುದನ್ನು ಕೇಳಲಿಚ್ಛಿಸುತ್ತೇನೆ. ಆದರೆ ನಿನ್ನ ಅಂತಃಕರಣವು ನನ್ನಲ್ಲಿ ಪೂರ್ಣವಾಗಿದ್ದುದು ನಿಜವಾದರೆ ಅಂಥ ಉಪಾಯವನ್ನು ನನಗೆ ನೀನು ತಿಳಿಹಿಸೆಂದು ಪ್ರಾರ್ಥಿಸಲು ॥ ೧೨ ॥ ಭಗವಂತನು ಅನ್ನುತ್ತಾನೆ—

ಯತ್ಕೃತ್ವಾಮುಚ್ಯತೇಮೋಹಾತ್ ತಚ್ಛೃಣುಷ್ವ ವದಾಮಿ ತೇ ॥ ೧೩ ॥
ವ್ರತಮಸ್ತಿ ಮಹತ್ಪುಣ್ಯಂ ಸ್ವರ್ಗೇ ಮರ್ತ್ಯೇ ಚ ದುರ್ಲಭಂ ।
ತವ ಸ್ನೇಹಾನ್ಮಯಾ ವತ್ಸ ಪ್ರಕಾಶಃ ಕ್ರಿಯತೇऽಧುನಾ ॥ ೧೪ ॥
ಸತ್ಯನಾರಾಯಣಸ್ಯೈವ ವ್ರತಂ ಸಮ್ಯಗ್ವಿಧಾನತಃ ।
ಕೃತ್ವಾಸದ್ಯಃ ಸುಖಂಭುಕ್ತ್ವಾಚಾಂತೇಮೋಕ್ಷಮವಾಪ್ನುಯಾತ್ ॥ ೧೫ ॥
ತತ್ ಶ್ರುತ್ವಾ ಭಗವದ್ವಾಕ್ಯಂ ನಾರದೋ ಮುನಿರಬ್ರವೀತ್ ।
ನಾರದ ಉವಾಚ—
ಕಿಂ ಫಲಂ ಕಿಂ ವಿಧಾನಂ ಚ ಕೃತಂ ಕೇನೈವ ತದ್ವ್ರತಂ ॥ ೧೬ ॥

ನಾರದನೇ, ಜನರಲ್ಲಿ ಅನುಗ್ರಹ ಮಾಡುವ ಅಪೇಕ್ಷೆಯಿಂದ ನನಗೆ ನೀನು ಬಹಳೇ ಚನ್ನಾಗಿ ಪ್ರಶ್ನೆಮಾಡಿದಿ, ಒಳ್ಳೆಯದು! ಏನು ಮಾಡುವದರಿಂದ ಜನರು ಅಂಥ ದುಃಖಗಳಿಂದ ಮುಕ್ತರಾಗುವರೆಂಬುದನ್ನು ನಿನಗೆ ನಾನು ಹೇಳುತ್ತೇನೆ ಕೇಳು. ॥ ೧೩ ॥ ಸ್ವರ್ಗದಲ್ಲಿಯೂ ಮತ್ತು ಮನುಷ್ಯ ಲೋಕದಲ್ಲಿಯೂ ಅತಿ ದುರ್ಲಭವಾದಂಥ ಒಂದು ವ್ರತವಿರುತ್ತದೆ. ಆದರೆ ನಾರದನೇ, ನಿನ್ನಲ್ಲಿ ನನ್ನ ಪ್ರೀತಿಯು ಬಹಳೇ ಇದ್ದಪ್ರಯುಕ್ತ ಆ ವ್ರತವು ಅತಿ ಗೌಪ್ಯವಾಗಿದ್ದರೂ ಹೇಳುತ್ತೇನೆ ಕೇಳು. ॥ ೧೪ ॥ "ಸತ್ಯನಾರಾಯಣ" ಎಂಬುದೊಂದು ವ್ರತವಿರುತ್ತದೆ. ಇದನ್ನು ವಿಧಾನ ಪೂರ್ವಕ ಮಾಡುವದರಿಂದ ಕೂಡಲೇ ಇಹದಲ್ಲಿ ಎಲ್ಲ ದುಃಖಗಳು ನಾಶವಾಗಿ ಕಡೆಗೆ ಯಥೇಚ್ಛ ಸುಖವನ್ನನುಭವಿಸುವದಲ್ಲದೇ ಮೋಕ್ಷಸುಖವನ್ನು ಹೊಂದುವನು. ॥ ೧೫ ॥ ಹೀಗೆ ಭಗವದ್ವಾಕ್ಯಗಳನ್ನು ಕೇಳಿ, ನಾರದರು ಅನ್ನುತ್ತಾರೆ— ಈ ವ್ರತ ಮಾಡುವದರಿಂದ ಫಲವೇನು ? ವಿಧಾನವು ಹೇಗೆ ?

ತತ್ಸರ್ವಂ ವಿಸ್ತರಾದ್ಬ್ರೂಹಿ ಕದಾ ಕಾರ್ಯಂ ಹಿ ತದ್ವ್ರತಂ ।

ಶ್ರೀ ಭಗವಾನ್ ಉವಾಚ—

ದುಃಖಶೋಕಾದಿ ಶಮನಂ ಧನಧಾನ್ಯಪ್ರವರ್ಧನಂ ॥ ೧೭ ॥
ಸೌಭಾಗ್ಯಸಂತತಿಕರಂ ಸರ್ವತ್ರ ವಿಜಯಪ್ರದಮ್ ।
ಯಸ್ಮಿನ್ ಕಸ್ಮಿನ್ ದಿನೇ ಮರ್ತ್ಯೋ ಭಕ್ತಿಶ್ರದ್ಧಾ ಸಮನ್ವಿತಃ ॥ ೧೮ ॥
ಸತ್ಯನಾರಾಯಣಂ ದೇವಂ ಯಜೇಚ್ಚೈವ ನಿಶಾಮುಖೇ ।
ಬ್ರಾಹ್ಮಣೈರ್ಬಾಂಧವೈಶ್ಚೈವ ಸಹಿತೋ ಧರ್ಮತತ್ಪರಃ ॥ ೧೯ ॥

ಮತ್ತು ಇದನ್ನು ಮೊದಲು ಯಾರು ಮಾಡಿದರು ? ॥ ೧೬ ॥ ಹಾಗೂ ಕಾಲವು ಯಾವುದು? ಇದನ್ನೆಲ್ಲ ಸವಿಸ್ತಾರವಾಗಿ ಹೇಳೆಂದು ನುಡಿಯುವ ನಾರದರ ಮಾತು ಕೇಳಿ, ಭಗವಂತನು ಅನ್ನುತ್ತಾನೆ— ಈ ವ್ರತವನ್ನು ಮಾಡುವದ ರಿಂದ ದುಃಖ ಶೋಕಗಳೆಲ್ಲ ನಾಶ ಹೊಂದುತ್ತವೆ. ಧನ-ಧಾನ್ಯಾದಿಗಳು ಅಭಿವೃದ್ಧಿಯಾಗುತ್ತವೆ. ॥ ೧೭ ॥ ಸೌಭಾಗ್ಯ, ಸಂತತಿ ಪ್ರಾಪ್ತಿಯಾಗುವುದು. ಮತ್ತು ಸರ್ವ ಕಾರ್ಯಗಳೂ ಈ ವ್ರತದ ಸ್ಮರಣದಿಂದಲೇ ಸಿದ್ಧಿಯನ್ನು ಹೊಂದುವವು ! ಇದೇ ಈ ವ್ರತದ ಫಲವು. ಇಂಥ ವ್ರತವನ್ನು ಮಾಡುವದಾದರೆ ತನ್ನ ಮನಸ್ಸಿನಲ್ಲಿ ಯಾವದಿನ ಮಾಡಬೇಕೆಂದಿರುವದೋ ಆ ದಿನ ಭಕ್ತಿಪೂರ್ವಕವಾಗಿ ''ನಿಶಾಮುಖ'' ಅಂದರೆ ಸಾಯಂಕಾಲದಲ್ಲಿ, ಬ್ರಾಹ್ಮಣ ರಿಂದಲೂ ಮತ್ತು ಬಾಂಧವರಿಂದಲೂ ಕೂಡಿಕೊಂಡು ಧರ್ಮದಲ್ಲಿ ಬುದ್ಧಿಯನ್ನಿಟ್ಟವನಾಗಿ ಶ್ರೀ ಸತ್ಯನಾರಾಯಣ ನನ್ನು ಭಕ್ತಿಪೂರ್ವಕವಾಗಿ ಪೂಜಿಸಬೇಕು. ॥ ೧೮ ॥ ೧೯ ॥

ನೈವೇದ್ಯಂ ಭಕ್ತಿತೋ ದದ್ಯಾತ್ ಸಪಾದಂ ಭಕ್ಷ್ಯಮುತ್ತಮಂ ।
ರಂಭಾಫಲಂ ಘೃತಂ ಕ್ಷೀರಂ ಗೋಧೂಮಸ್ಯ ಚ ಚೂರ್ಣಕಂ ॥ ೨೦ ॥
ಅಭಾವೇ ಶಾಲಿಚೂರ್ಣಂ ವಾ ಶರ್ಕರಾಂ ವಾ ಗುಡಂ ತಥಾ ।
ಸಪಾದಂ ಸರ್ವಭಕ್ಷ್ಯಾಣಿ ಚೈಕೀಕೃತ್ಯ ನಿವೇದಯೇತ್ ॥ ೨೧ ॥
ವಿಪ್ರಾಯ ದಕ್ಷಿಣಾಂ ದದ್ಯಾತ್ ಕಥಾಂ ಶ್ರುತ್ವಾ ಜನೈಃಸಹ ।
ತತಶ್ಚ ಬಂಧುಭಿಃ ಸಾರ್ಧಂ ವಿಪ್ರಾಂಶ್ಚ ಪ್ರತಿಭೋಜಯೇತ್ ॥ ೨೨ ॥
ಸಪಾದಂ ಭಕ್ಷಯೇತ್ ಭಕ್ತ್ಯಾ ನೃತ್ಯಗೀತಾದಿಕಂ ಚರೇತ್ ।
ತತಶ್ಚ ಸ್ವಗೃಹಂ ಗಚ್ಛೇತ್ ಸತ್ಯನಾರಾಯಣಂ ಸ್ಮರನ್ ॥ ೨೩ ॥

ಉತ್ತಮ (ಸಪಾದ) ಸವ್ವಾಸೇರು ಭಕ್ಷ್ಯವನ್ನು ನೈವೇದ್ಯ ಕೊಡಬೇಕು. ಬಾಳೆಹಣ್ಣು, ತುಪ್ಪ, ಹಾಲು, ಮತ್ತು ಗೋದಿಯ ಸಜ್ಜಿಗೆ ॥ ೨೦ ॥ ಗೋದಿಯ ಸಜ್ಜಿಗೆಯು ಸಿಗದಿದ್ದ ಪಕ್ಷದಲ್ಲಿ ಅಕ್ಕಿಯ ಸಜ್ಜಿಗೆಯನ್ನು, ಸಕ್ಕರೆಯನ್ನು, ಸಕ್ಕರೆ ಇಲ್ಲದಿದ್ದರೆ ಬೆಲ್ಲವನ್ನು ಒಂದೇ ಪಾತ್ರೆಯಲ್ಲಿ ಎಲ್ಲ ಪದಾರ್ಥಗಳನ್ನು ಸವ್ವಾ ಸೇರಿನಂತೆ ಕೂಡಿಸಿ, ಬೇಯಿಸಿ ನಿವೇದನ ಮಾಡಬೇಕು. ॥ ೨೧ ॥ ಆಮೇಲೆ ತನ್ನ ಆಪ್ತೇಷ್ಟರುಗಳಿಂದ ಯುಕ್ತನಾಗಿ ಬ್ರಾಹ್ಮಣನ ಮುಖದಿಂದ ಶ್ರೀಸತ್ಯನಾರಾಯಣನ ಕಥೆಯನ್ನು ಕೇಳಿ, ಆ ಬ್ರಾಹ್ಮಣನಿಗೆ ತಾಂಬೂಲ ದಕ್ಷಿಣಾದಿಗಳನ್ನು ಕೊಟ್ಟು, ಬ್ರಾಹ್ಮಣರಿಗೆ ಭೋಜನಕ್ಕೆ ಹಾಕಿ, ತದನಂತರ ಆಪ್ತೇಷ್ಟರುಗಳಿಂದ ಕೂಡಿ, ತಾವೂ ಊಟವನ್ನುಮಾಡಿ. ॥ ೨೨ ॥ ತದನಂತರ ಆ ಪ್ರಸಾದ ನೈವೇದ್ಯವನ್ನು ಭಕ್ತಿಪೂರ್ವಕ ತಿಂದು ಅವತ್ತಿನ ದಿನ ರಾತ್ರಿಯಲ್ಲಿ ನೃತ್ಯ-ಗೀತಗಳನ್ನು ಮಾಡಬೇಕು. ಆಮೇಲೆ ಶ್ರೀಸತ್ಯನಾರಾಯಣನನ್ನು ಮನಸಾ ಸ್ಮರಿಸುತ್ತ

ಏವಂ ಕೃತೇ ಮನುಷ್ಯಾಣಾಂ ವಾಂಛಾಸಿದ್ಧಿರ್ಭವೇದ್ಧ್ರುವಂ ।
ವಿಶೇಷತಃ ಕಲಿಯುಗೇ ಲಘೂಪಾಯೋಽಸ್ತಿ ಭೂತಲೇ ॥ ೨೪ ॥
ಇತಿ ಶ್ರೀಸ್ಕಂದಪುರಾಣೇ ರೇವಾಖಂಡೇ ಸತ್ಯನಾರಾಯಣ
ಕಥಾಯಾಂ ಪ್ರಥಮೋಽಧ್ಯಾಯಃ ॥ ೧ ॥

ಸೂತ ಉವಾಚ—

ಅಥಾನ್ಯತ್ಸಂಪ್ರವಕ್ಷ್ಯಾಮಿ ಕೃತಂ ಯೇನ ಪುರಾ ದ್ವಿಜ ।
ಕಶ್ಚಿತ್ಕಾಶೀಪುರೇ ರಮ್ಯೇ ಹ್ಯಾಸೀದ್ವಿಪ್ರೋಽತಿನಿರ್ಧನಃ ॥ ೧॥
ಕ್ಷುತ್ತೃಡ್ಭ್ಯಾಂ ವ್ಯಾಕುಲೋ ಭೂತ್ವಾ ನಿತ್ಯಂ ಬಭ್ರಾಮ ಭೂತಲೇ ।
ದುಃಖಿತಂ ಬ್ರಾಹ್ಮಣಂ ದೃಷ್ಟ್ವಾ ಭಗವಾನ್ ಬ್ರಾಹ್ಮಣಪ್ರಿಯಃ ॥ ೨ ॥

ಮನೆಗೆ ಹೋಗಬೇಕು. ।೨೩॥ ಹೀಗೆ ಮಾಡಿದಲ್ಲಿ ಮನುಷ್ಯರ ಮನೋರಥವು ಕೂಡಲೇ ಸಿದ್ಧಿಯಾಗುವುದು. ವಿಶೇಷವಾಗಿ ಭೂತಲದಲ್ಲಿ ಈ ವ್ರತವು ಕಲಿಯುಗದಲ್ಲಿ ಬಹು ಸುಲಭ ವಾಗಿ ತೀವ್ರವಾಗಿ ಫಲ ಕೊಡುವಂಥಾದ್ದಾಗಿದೆ. ॥ ೨೪ ॥

ಹೀಗೆ ಶ್ರೀ ಸ್ಕಂದಪುರಾಣೋಕ್ತ ರೇವಾಖಂಡದಲ್ಲಿ ಹೇಳಿರುವ ಶ್ರೀಸತ್ಯನಾರಾಯಣ ಕಥೆಯಲ್ಲಿ ಮೊದಲನೆಯ ಅಧ್ಯಾಯವು ಮುಗಿದುದು.

ಸೂತರು ಅನ್ನುತ್ತಾರೆ— ಆಮೇಲೆ ಮತ್ತೆ ಈ ವ್ರತವನ್ನು ಪೂರ್ವದಲ್ಲಿ ಯಾರು ಮಾಡಿದರೆಂಬುವ ವೃತ್ತಾಂತವನ್ನು ಹೇಳುತ್ತೇನೆ ಕೇಳಿರಿ, ಕಾಶೀಪಟ್ಟಣದಲ್ಲಿ ಅತಿದರಿದ್ರನಾದ ಒಬ್ಬ ಬ್ರಾಹ್ಮಣನಿದ್ದನು. ॥೧॥ ಆತನು ಹಸಿವೆ ನೀರಡಿಕೆ ಗಳಿಂದ ಪೀಡಿತನಾಗಿ ನಿತ್ಯವೂ ಭೂಮಿಯಲ್ಲಿ ಸಂಚರಿಸು-ತ್ತಿದ್ದನು. ದಾರಿದ್ರ್ಯದಿಂದ ಅತಿ ದುಃಖಿತನಾದ ಬ್ರಾಹ್ಮಣನನ್ನು ನೋಡಿ, ಬ್ರಾಹ್ಮಣರಲ್ಲಿ ಅಂತಃಕರಣವುಳ್ಳ ಭಗವಂತನು ।೨॥

ವೃದ್ಧಬ್ರಾಹ್ಮಣರೂಪಸ್ತಂ ಪಪ್ರಚ್ಛ ದ್ವಿಜಮಾದರಾತ್ ।
ಕಿಮರ್ಥಂ ಭ್ರಮಸೇ ವಿಪ್ರ ಮಹೀಂ ನಿತ್ಯಂ ಸುದುಃಖಿತಃ ॥ ೩ ॥
ತತ್ಸರ್ವಂ ಶ್ರೋತುಮಿಚ್ಛಾಮಿ ಕಥ್ಯತಾಂ ದ್ವಿಜಸತ್ತಮ ।

ಬ್ರಾಹ್ಮಣ ಉವಾಚ—

ಬ್ರಾಹ್ಮಣೋಽತಿದರಿದ್ರೋಽಹಂ ಭಿಕ್ಷಾರ್ಥಂ ವೈ ಭ್ರಮೇ ಮಹೀಂ ॥೪॥
ಉಪಾಯಂ ಯದಿ ಜಾನಾಸಿ ಕೃಪಯಾ ಕಥಯ ಪ್ರಭೋ ।

ವೃದ್ಧಬ್ರಾಹ್ಮಣ ಉವಾಚ—

ಸತ್ಯನಾರಾಯಣೋ ವಿಷ್ಣುರ್ವಾಂಛಿತಾರ್ಥ ಫಲಪ್ರದಃ ॥ ೫ ॥

ವೃದ್ಧಬ್ರಾಹ್ಮಣನ ರೂಪವನ್ನು ಧರಿಸಿ, ಆತನ ಹತ್ತಿರ ಬಂದು, ಆ ಬ್ರಾಹ್ಮಣನಿಗೆ ಕೇಳುತ್ತಾನೆ— ಹೇ ಬ್ರಾಹ್ಮಣನೇ, ನೀನು ನಿತ್ಯದಲ್ಲಿ ದುಃಖಿತನಾಗಿ ಭೂಮಿಯಲ್ಲಿ ಸಂಚರಿಸುವ ಕಾರಣವೇನು ? ॥ ೩ ॥ ಇದರ ಕಾರಣಗಳನ್ನೆಲ್ಲ ನಾನು ಕೇಳುವದಕ್ಕಾಗಿ ಇಚ್ಛಿಸಿರುತ್ತೇನೆ. ಹೇಳೆನ್ನಲು, ಬ್ರಾಹ್ಮಣನು ಅನ್ನುತ್ತಾನೆ— ಹೇ ಪ್ರಭೋ ! ನಾನು ಬ್ರಾಹ್ಮಣನಿದ್ದು ಅತಿ ದರಿದ್ರನು. ಹೊಟ್ಟೆತುಂಬಿಕೊಳ್ಳುವದಕ್ಕಾಗಿ ಭಿಕ್ಷೆಯನ್ನು ಬೇಡುತ್ತಾ ಭೂಮಿಯಲ್ಲಿ ಹೀಗೆ ಸಂಚರಿಸುತ್ತೇನೆ. ॥ ೪ ॥ ಈ ನನ್ನ ದಾರಿದ್ರ್ಯ ನಾಶವಾಗುವಂಥ ಉಪಾಯವನ್ನು ನೀನು ಬಲ್ಲವನಿದ್ದರೆ ನನ್ನ ಮೇಲಿನ ಅಂತಃಕರಣದಿಂದ ಹೇಳೆನ್ನಲು, ವೃದ್ಧಬ್ರಾಹ್ಮಣ ರೂಪ ಧರಿಸಿದ ನಾರಾಯಣನು ಅನ್ನುತ್ತಾನೆ— ಎಲೋ ಬ್ರಾಹ್ಮಣನೇ ! ಸತ್ಯನಾರಾಯಣನೆಂಬ ಶ್ರೀವಿಷ್ಣುವು ಮನಸ್ಸಿನಲ್ಲಿ ಅಪೇಕ್ಷಿಸಿದ ಫಲಗಳನ್ನು ಕೊಡುತ್ತಾನೆ. ॥ ೫ ॥ ನೀನು ಆತನ ಪೂಜೆಯನ್ನು ಮಾಡು.

ತಸ್ಯ ತ್ವಂ ಪೂಜನಂ ವಿಪ್ರ ಕುರುಷ್ವ ವ್ರತಮುತ್ತಮಮ್ ।
ಯತ್ಕೃತ್ವಾ ಸರ್ವದುಃಖೇಭ್ಯೋ ಮುಕ್ತೋ ಭವತಿ ಮಾನವಃ ॥ ೬ ॥
ವಿಧಾನಂ ಚ ವ್ರತಸ್ಯಾಸ್ಯ ವಿಪ್ರಾಯಾಭಾಷ್ಯ ಯತ್ನತಃ ।
ಸತ್ಯನಾರಾಯಣೋ ವೃದ್ಧಸ್ತತ್ರೈವಾಂತರಧೀಯತ ॥ ೭ ॥
ತದ್ವ್ರತಂ ಸಂಕರಿಷ್ಯಾಮಿ ಯದುಕ್ತಂ ಬ್ರಾಹ್ಮಣೇನ ವೈ ।
ಇತಿ ಸಂಚಿಂತ್ಯ ವಿಪ್ರೋಽಸೌ ರಾತ್ರೌ ನಿದ್ರಾಂ ನ ಲಬ್ಧವಾನ್ ॥ ೮ ॥
ತತಃ ಪ್ರಾತಃಸಮುತ್ಥಾಯ ಸತ್ಯನಾರಾಯಣವ್ರತಂ ।
ಕರಿಷ್ಯೇ ಇತಿ ಸಂಕಲ್ಪ್ಯ ಭಿಕ್ಷಾರ್ಥಮಗಮದ್ದ್ವಿಜಃ ॥ ೯ ॥

ಈ ಸತ್ಯನಾರಾಯಣನ ವ್ರತವನ್ನು ಮಾಡುವದರಿಂದ ಮನುಷ್ಯನು ತತ್ಕಾಲದಲ್ಲಿ ಎಲ್ಲ ದುಃಖಗಳಿಂದ ಮುಕ್ತನಾಗುತ್ತಾನೆ. ॥೬॥ ಹೀಗೆ ಹೇಳಿ, ಆ ವ್ರತದ ವಿಧಾನವನ್ನಾದರೂ ಆ ಬ್ರಾಹ್ಮಣನಿಗೆ ಚನ್ನಾಗಿ ತಿಳುಹಿಸಿ, ವೃದ್ಧ ಬ್ರಾಹ್ಮಣನ ರೂಪವನ್ನು ಧರಿಸಿದ ಶ್ರೀಸತ್ಯನಾರಾಯಣನು ಅಲ್ಲಿಯೇ ಅದೃಶ್ಯನಾದನು.॥೭॥ ಆಗ್ಗೆ ''ವೃದ್ಧಬ್ರಾಹ್ಮಣನು ಹೇಳಿದಂಥ ವ್ರತವನ್ನು ನಾನು ಮಾಡುವೆನು'' ಎಂದು ಬ್ರಾಹ್ಮಣನು ಮನಸಾ ನಿಶ್ಚಯಿಸಿದನು. ಈ ಚಿಂತೆಯಿಂದ ಆತನಿಗೆ ರಾತ್ರಿ ಕಾಲದಲ್ಲಿ ನಿದ್ದೆ ಸಹ ಬರಲಿಲ್ಲ. ॥ ೮ ॥ ಆದರಿಂದ ಆತನು ಪ್ರಾತಃಕಾಲದಲ್ಲಿ ಎದ್ದು, ಈ ಹೊತ್ತು ನಾನು ಶ್ರೀಸತ್ಯನಾರಾಯಣನ ವ್ರತವನ್ನು ಮಾಡುವದು ನಿಶ್ಚಯವೆಂದು ಮನಸ್ಸಿನಲ್ಲಿ ಸಂಕಲ್ಪವನ್ನು ಮಾಡಿ, ಭಿಕ್ಷೆಗಾಗಿ ಹೋದನು. ॥೯॥ ಆ ದಿವಸ ಆತನಿಗೆ ಪ್ರತಿದಿವಸದಲ್ಲಿಸಿಗುವ ದ್ರವ್ಯಕ್ಕಿಂತಲೂ ಹೆಚ್ಚು ದ್ರವ್ಯವು ಸಿಗಲು,

ತಸ್ಮಿನ್ನೇವ ದಿನೇ ವಿಪ್ರಃ ಪ್ರಚುರಂ ದ್ರವ್ಯಮಾಪ್ತವಾನ್ ।
ತೇನೈವ ಬಂಧುಭಿಃ ಸಾರ್ಧಂ ಸತ್ಯಸ್ಯ ವ್ರತಮಾಚರತ್ ॥ ೧೦ ॥
ಸರ್ವದುಃಖ ವಿನಿರ್ಮುಕ್ತಃ ಸರ್ವಸಂಪತ್ಸಮನ್ವಿತಃ ।
ಬಭೂವ ಸ ದ್ವಿಜಶ್ರೇಷ್ಠೋ ವ್ರತಸ್ಯಾಸ್ಯ ಪ್ರಭಾವತಃ ॥ ೧೧ ॥
ತತಃ ಪ್ರಭೃತಿ ಕಾಲೇ ಚ ಮಾಸಿ ಮಾಸಿ ವ್ರತಂ ಕೃತಂ ।
ಏವಂ ನಾರಾಯಣಸ್ಯೇದಂ ವ್ರತಂ ಕೃತ್ವಾ ದ್ವಿಜೋತ್ತಮಃ ॥ ೧೨ ॥
ಸರ್ವಪಾಪವಿನಿರ್ಮುಕ್ತೋ ದುರ್ಲಭಂ ಮೋಕ್ಷಮಾಪ್ತವಾನ್ ।
ವ್ರತಮಸ್ಯ ಯದಾ ವಿಪ್ರ ಪೃಥಿವ್ಯಾಂ ಸಂಕರಿಷ್ಯತಿ ॥ ೧೩ ॥
ತದೈವ ಸರ್ವದುಃಖಂ ಚ ಮನುಜಸ್ಯ ವಿನಶ್ಯತಿ ।
ಏವಂ ನಾರಾಯಣೋಕ್ತಂ ನಾರದಾಯ ಮಹಾತ್ಮನೇ ॥ ೧೪ ॥

ಸಂತೋಷದಿಂದ ಅದೇ ದ್ರವ್ಯವನ್ನು ವೆಚ್ಚಮಾಡಿ ತನ್ನ ಬಂಧು ಜನರಿಂದ ಕೂಡಿಕೊಂಡು ಶ್ರೀಸತ್ಯನಾರಾಯಣನ ವ್ರತವನ್ನು ಮಾಡಿದನು. ॥ ೧೦ ॥ ಆ ವ್ರತ ಪ್ರಭಾವದಿಂದ ಆ ಬ್ರಾಹ್ಮಣ ಶ್ರೇಷ್ಠನ ದುಃಖವೆಲ್ಲ ನಾಶ ಹೊಂದಿತು. ಅವನು ಧನಧಾನ್ಯಾದಿ ಐಶ್ವರ್ಯಗಳಿಂದ ಸಮೃದ್ಧನಾದನು. ॥ ೧೧ ॥ ಆ ದಿನವನ್ನಾರಂಭಿಸಿ ಆ ಉತ್ತಮ ಬ್ರಾಹ್ಮಣನು ಪ್ರತಿಯೊಂದು ತಿಂಗಳಲ್ಲಿ ಈ ಸತ್ಯನಾರಾಯಣನ ವ್ರತವನ್ನು ಮಾಡಿ ॥ ೧೨ ॥ ಎಲ್ಲ ಪಾಪಗಳಿಂದ ಮುಕ್ತನಾಗಿ, ದುರ್ಲಭವಾದ ಮೋಕ್ಷವನ್ನು ಹೊಂದಿದನು. ಹೇ ನಾರದನೇ, ಈ ವ್ರತವನ್ನು ಭೂಲೋಕದಲ್ಲಿ ಮಾಡಿದ ಮನುಷ್ಯನು ಎಲ್ಲ ದುಃಖಗಳಿಂದ ಮುಕ್ತನಾಗುವನು. ಹೀಗೆ ದಯಾಳುವಾದ ಶ್ರೀಮನ್ನಾರಾಯಣನು ನಾರದರಿಗೆ ಹೇಳಿದ್ದನ್ನು ॥ ೧೩ ॥ ೧೪ ॥ ನಿಮ್ಮ ಮುಂದೇ ಹೇಳಿದೆನು.

ಮಯಾ ತತ್ಕಥಿತಂ ವಿಪ್ರಾಃ ಕಿಮನ್ಯತ್ಕಥಯಾಮಿ ವಃ ।

ಋಷಯಃ ಊಚುಃ—

ತಸ್ಮಾದ್ವಿಪ್ರಾಚ್ಛ್ರುತಂ ಕೇನ ಪೃಥಿವ್ಯಾಂ ಚರಿತಂ ಮುನೇ ।
ತತ್ಸರ್ವಂ ಶ್ರೋತುಮಿಚ್ಛಾಮಃ ಶ್ರದ್ಧಾಸ್ಮಾಕಂ ಪ್ರಜಾಯತೇ ॥ ೧೫ ॥

ಸೂತ ಉವಾಚ—

ಶೃಣುಧ್ವಂ ಮುನಯಃ ಸರ್ವೇ ವ್ರತಂ ಯೇನ ಕೃತಂ ಭುವಿ ।
ಏಕದಾ ಸ ದ್ವಿಜವರೋ ಯಥಾ ವಿಭವವಿಸ್ತರೈಃ ॥ ೧೬ ॥
ಬಂಧುಭಿಃ ಸ್ವಜನೈಃ ಸಾರ್ಧಂ ವ್ರತಂ ಕರ್ತುಂ ಸಮುದ್ಯತಃ ।
ಏತಸ್ಮಿನ್ನಂತರೇ ಕಾಲೇ ಕಾಷ್ಠಕ್ರೇತಾ ಸಮಾಗಮತ್ ॥ ೧೭ ॥

ಋಷಿಗಳಿರಾ, ನಿಮಗೆ ಇನ್ನೇನು ಹೇಳಲಿ. ಎಂದು ಕೇಳಲಾಗಿ ಋಷಿಗಳು ಅನ್ನುತ್ತಾರೆ— ಆ ಬ್ರಾಹ್ಮಣನ ಮುಖದಿಂದ ಆ ವ್ರತ ಪ್ರಭಾವವನ್ನು ಮತ್ತೂ ಯಾರು ಕೇಳಿದರು. ಈ ವ್ರತವು ಭೂಮಿಯಲ್ಲಿ ಹೇಗೆ ಪ್ರಸಿದ್ಧಿಯನ್ನು ಹೊಂದಿತು. ಇದನ್ನೆಲ್ಲ ನಮ್ಮ ಮುಂದೆ ಹೇಳು. ಕೇಳಬೇಕೆಂಬ ಇಚ್ಛೆಯು ಬಲವಾಗಿದೆ. ಶ್ರದ್ಧೆಯೂ ಹೆಚ್ಚುತ್ತಿದೆ. ॥ ೧೫ ॥ ಹೀಗೆ ಋಷಿಗಳ ಮಾತನ್ನು ಕೇಳಿ, ಸೂತರು ಅನ್ನುತ್ತಾರೆ— ಋಷಿಗಳಿರಾ, ಈ ವ್ರತವನ್ನು ಭೂಮಿಯಲ್ಲಿ ಮತ್ತೂ ಯಾರು ಮಾಡಿದರೆಂಬುದನ್ನು ಹೇಳುತ್ತೇನೆ ಕೇಳಿರಿ. ಒಂದು ದಿನ ಆ ಬ್ರಾಹ್ಮಣನು ತನ್ನ ಐಶ್ವರ್ಯಾನುಸಾರವಾಗಿ ಬಾಂಧವರಿಂದಲೂ, ಸ್ವಜನರಿಂದಲೂ, ಕೂಡಿಕೊಂಡು ಶ್ರೀಸತ್ಯ-ನಾರಾಯಣನ ವ್ರತವನ್ನು ಮಾಡುತ್ತಿರಲು, ಅದೇ ಸಮಯದಲ್ಲಿ ಒಬ್ಬ ಕಟ್ಟಿಗೆ ಹೊರೆಯನ್ನು ಮಾರುವವನು ಬಂದು ॥ ೧೬ ॥ ೧೭ ॥ ಹೊರಗೆ ಕಟ್ಟಿಗೆ ಹೊರೆಯನ್ನು ಇಟ್ಟು

ಬಹಿಃ ಕಾಷ್ಠಂ ಚ ಸಂಸ್ಥಾಪ್ಯ ವಿಪ್ರಸ್ಯ ಗೃಹಮಾಯಯೌ ।
ತೃಷ್ಣಯಾ ಪೀಡಿತಾತ್ಮಾ ಚ ದೃಷ್ಟ್ವಾ ವಿಪ್ರಂ ಕೃತವ್ರತಂ ॥ ೧೮ ॥
ಪ್ರಣಿಪತ್ಯ ದ್ವಿಜಂ ಪ್ರಾಹ ಕಿಮಿದಂ ಕ್ರಿಯತೇ ತ್ವಯಾ ।
ಕೃತೇ ಕಿಂ ಫಲಪ್ರಾಪ್ನೋತಿ ವಿಸ್ತರಾದ್ವದ ಮೇ ಪ್ರಭೋ ॥ ೧೯ ॥

ವಿಪ್ರ ಉವಾಚ—

ಸತ್ಯನಾರಾಯಣಸ್ಯೇದಂ ವ್ರತಂ ಸರ್ವೇಪ್ಸಿತಪ್ರದಂ ।
ತಸ್ಯ ಪ್ರಸಾದಾನ್ಮೇ ಸರ್ವಂ ಧನಧಾನ್ಯಾದಿಕಂ ಮಹತ್ ॥ ೨೦ ॥
ತಸ್ಮಾದೇತದ್ವ್ರತಂ ಜ್ಞಾತ್ವಾ ಕಾಷ್ಠಕ್ರೇತಾತಿಹರ್ಷಿತಃ ।

ನೀರಡಿಕೆಯಿಂದ ಪೀಡಿತನಾಗಿ, ಆ ಬ್ರಾಹ್ಮಣನ ಮನೆಯಲ್ಲಿ ಹೋಗಿ, ಆತನು ಮಾಡುತ್ತಿರುವಂಥ ಶ್ರೀ ಸತ್ಯನಾರಾಯಣನ ವ್ರತವನ್ನು ನೋಡಿ, ॥ ೧೮ ॥ ಆತನಿಗೆ ನಮಸ್ಕರಿಸಿ. ಬ್ರಾಹ್ಮಣನೇ, ನೀನು ಏನು ಮಾಡಲಾರಂಭಿಸಿರುವಿ ? ಮತ್ತು ಇದನ್ನು ಮಾಡುವದರಿಂದ ಏನು ಫಲಬರುವದು. ಇದನ್ನೆಲ್ಲ ನನ್ನ ಮುಂದೆ ಸವಿಸ್ತಾರವಾಗಿ ಹೇಳು, ಎಂದು ಕೇಳಲು ॥೧೯॥ ಬ್ರಾಹ್ಮಣನು ಅನ್ನುತ್ತಾನೆ— ಎಲೈ ಕಟ್ಟಿಗೆ ಮಾರುವವನೇ, ಎಲ್ಲರ ಮನೋರಥವನ್ನು ಪೂರ್ಣ ಮಾಡಿ ಕೊಡುವಂಥ ಶ್ರೀ ಸತ್ಯನಾರಾಯಣನ ವ್ರತವನ್ನು ನಾನು ಮಾಡುತ್ತೇನೆ. ಈ ವ್ರತದ ಪ್ರಭಾವದಿಂದಲೇ ಧನ-ಧಾನ್ಯಾದಿ ಐಶ್ವರ್ಯವು ನನಗೆ ಪ್ರಾಪ್ತವಾಗಿರುತ್ತದೆಂದು ಹೇಳಲು, ॥೨೦॥ ಆ ಕಟ್ಟಿಗೆ ಮಾರುವವನು ಬ್ರಾಹ್ಮಣನ ಮುಖದಿಂದ ಆ ವ್ರತದ ವಿಧಾನವನ್ನೆಲ್ಲ ತಿಳಿದುಕೊಂಡು ಸಂತೋಷದಿಂದ ಶ್ರೀಸತ್ಯನಾರಾಯಣನ ಪ್ರಸಾದವನ್ನು ಭಕ್ಷಿಸಿ, ನೀರನ್ನು

ಪಪೌ ಜಲಂ ಪ್ರಸಾದಂ ಚ ಭುಕ್ತ್ವಾ ಸ್ವನಗರಂ ಯಯೌ ॥ ೨೧ ॥
ಸತ್ಯನಾರಾಯಣಂ ದೇವಂ ಮನಸಾ ಇತ್ಯಚಿಂತಯತ್ ।
ಕಾಷ್ಠಂ ವಿಕ್ರಯತೋ ಗ್ರಾಮೇ ಪ್ರಾಪ್ಯತೇ ಚಾದ್ಯ ಯದ್ಧನಂ ॥ ೨೨ ॥
ತೇನೈವ ಸತ್ಯದೇವಸ್ಯ ಕರಿಷ್ಯೇ ವ್ರತಮುತ್ತಮಮ್ ।
ಇತಿ ಸಂಚಿಂತ್ಯ ಮನಸಾ ಕಾಷ್ಠಂ ಕೃತ್ವಾ ತು ಮಸ್ತಕೇ ॥ ೨೩ ॥
ಜಗಾಮ ನಗರೇ ರಮ್ಯೇ ಧನಿನಾಂ ಯತ್ರ ಸಂಸ್ಥಿತಿಃ ।
ತದ್ದಿನೇ ಕಾಷ್ಠಮೂಲಂ ಚ ದ್ವಿಗುಣಂ ಪ್ರಾಪ್ತವಾನಸೌ ॥ ೨೪ ॥
ತತಃ ಪ್ರಸನ್ನಹೃದಯಃ ಸುಪಕ್ವಂ ಕದಲೀಫಲಂ ।
ಶರ್ಕರಾ ಘೃತ ದುಗ್ಧಂ ಚ ಗೋಧೂಮಸ್ಯ ಚ ಚೂರ್ಣಕಂ ॥ ೨೫ ॥

ಕುಡಿದು, ಊಟವನ್ನು ಮಾಡಿ, ತನ್ನ ಊರಿಗೆ ಹೋದನು. ॥ ೨೧ ॥ ಅನಂತರ ಆ ಕಾಷ್ಠಕ್ರೇತನು ಶ್ರೀ ಸತ್ಯನಾರಾಯಣನನ್ನು ಕುರಿತು ಹೀಗೆ ಪ್ರಾರ್ಥಿಸಿದನು. ಏನೆಂದರೆ— ಈ ಹೊತ್ತು ಊರಲ್ಲಿ ಈ ಕಟ್ಟಿಗೆ ಹೊರೆಯನ್ನು ಮಾರುವದರಿಂದ ನನಗೆ ಏನು ದ್ರವ್ಯ ಸಿಗುವದೋ ॥ ೨೨ ॥ ಆ ದ್ರವ್ಯದಿಂದ ನಾನು ಶ್ರೀಸತ್ಯನಾರಾಯಣ ವ್ರತವನ್ನು ಮಾಡುವೆನೆಂದು ಮನಸಾ ನಿಶ್ಚಯ ಮಾಡಿ, ಕೂಡಲೇ ಕಟ್ಟಿಗೆಯ ಹೊರೆಯನ್ನು ತನ್ನ ತಲೆಯಮೇಲೆ ಹೊತ್ತುಕೊಂಡವನಾಗಿ ॥ ೨೩ ॥ ಧನಿಕರಿರುವ ಓಣಿಯಲ್ಲಿ ಹೋಗಿ ಮಾರಲು, ಆ ದಿನ ಆತನಿಗೆ ದಿನಕ್ಕಿಂತ ಎರಡು ಪಾಲು ಹೆಚ್ಚು ದ್ರವ್ಯವು ಸಿಕ್ಕಿತು. ॥ ೨೪ ॥ ಆದರಿಂದ ಅವನು ಸಂತುಷ್ಟನಾಗಿ ಬಾಳೆಹಣ್ಣು, ತುಪ್ಪ, ಸಕ್ಕರೆ, ಹಾಲು, ಗೋದಿಯ ಸಜ್ಜಿಗೆ ಇವುಗಳನ್ನು ತೆಗೆದುಕೊಂಡು ॥ ೨೫ ॥

ಕೃತ್ವೈಕತ್ರ ಸಪಾದಂ ಚ ಗೃಹೀತ್ವಾ ಸ್ವಗೃಹಂ ಯಯೌ ।
ತತೋ ಬಂಧೂನ್ ಸಮಾಹೂಯ ಚಕಾರ ವಿಧಿನಾ ವ್ರತಂ ॥ ೨೬ ॥
ತದ್ವ್ರತಸ್ಯ ಪ್ರಭಾವೇಣ ಧನಪುತ್ರಾನ್ವಿತೋಽಭವತ್ ।
ಇಹಲೋಕೇ ಸುಖಂ ಭುಕ್ತ್ವಾ ಚಾಂತೇ ಸತ್ಯಪುರಂ ಯಯೌ ॥ ೨೭ ॥

ಇತಿ ಶ್ರೀ ಸ್ಕಂದಪುರಾಣೇ .....ದ್ವಿತೀಯೋಽಧ್ಯಾಯಃ ॥ ೨ ॥

ಸೂತ ಉವಾಚ—
ಪುನರಗ್ರೇ ಪ್ರವಕ್ಷ್ಯಾಮಿ ಶೃಣುಧ್ವಂ ಮುನಿಸತ್ತಮಾಃ ।
ಪುರಾ ಚೋಲ್ಕಾಮುಖೋ ನಾಮ ನೃಪಶ್ಚಾಸೀನ್ಮಹೀಪತಿಃ ॥ ೧ ॥

ಸಪಾದ ಮಾಡಿ, ಎಲ್ಲವನ್ನು ಒಂದು ಕಡೆಯಲ್ಲಿ ಕೂಡಿಸಿ, ಮನೆಗೆಹೋಗಿ, ತನ್ನ ಬಂಧುಜನರಿಂದ ಕೂಡಿ, ವಿಧಿಪೂರ್ವಕ ಶ್ರೀ ಸತ್ಯನಾರಾಯಣನ ವ್ರತವನ್ನು ಮಾಡಿದನು. ।೨೬॥ ಆ ವ್ರತಪ್ರಭಾವದಿಂದ ಐಶ್ವರ್ಯ, ಮಕ್ಕಳು ಇವುಗಳಿಂದ ಯುಕ್ತನಾಗಿ ಇಹಲೋಕದಲ್ಲಿ ಪೂರ್ಣ ಸೌಖ್ಯವನ್ನು ಅನುಭವಿಸಿ, ಅನಂತರ ಸತ್ಯಪುರಕ್ಕೆ ಹೋದನು. ॥ ೨೭ ॥

ಹೀಗೆ ಶ್ರೀ ಸ್ಕಂದಪುರಾಣೋಕ್ತ ರೇವಾಖಂಡದಲ್ಲಿ ಹೇಳಿರುವ ಶ್ರೀ ಸತ್ಯನಾರಾಯಣ ಕಥೆಯಲ್ಲಿ ಎರಡನೇ ಅಧ್ಯಾಯವು ಮುಗಿದುದು.

ಸೂತರು ಅನ್ನುತ್ತಾರೆ— ಋಷಿಗಳಿರಾ, ಮತ್ತೂ ಒಂದು ಕಥೆಯನ್ನು ಹೇಳುತ್ತೇನೆ ಕೇಳಿರಿ. ಪೂರ್ವದಲ್ಲಿ ಉಲ್ಕಾಮುಖನೆಂಬ ಒಬ್ಬ ರಾಜನಿದ್ದನು. ॥ ೧ ॥ ಅವನು ಇಂದ್ರಿಯಗಳನ್ನು ಯಾವತ್ತೂ ತನ್ನ ಸ್ವಾಧೀನದಲ್ಲಿಟ್ಟು-

ಜಿತೇಂದ್ರಿಯಃ ಸತ್ಯವಾದೀ ಯಯೌ ದೇವಾಲಯಂ ಪ್ರತಿ ।
ದಿನೇ ದಿನೇ ಧನಂ ದತ್ವಾ ದ್ವಿಜಾನ್ಸಂತೋಷಯತ್ಸುಧೀಃ ॥ ೨ ॥
ಭಾರ್ಯಾ ತಸ್ಯ ಪ್ರಮುಗ್ಧಾ ಚ ಸರೋಜವದನಾ ಸತೀ ।
ಭದ್ರಶೀಲಾ ನದೀತೀರೇ ಸತ್ಯಸ್ಯ ವ್ರತಮಾಚರತ್ ॥ ೩ ॥
ಏತಸ್ಮಿನ್ನಂತರೇ ತತ್ರ ಸಾಧುರೇಕಃ ಸಮಾಗತಃ ।
ವಾಣಿಜ್ಯಾರ್ಥಂ ಬಹುಧನೈರನೇಕೈಃ ಪರಿಪೂರಿತಃ ॥ ೪ ॥
ನಾವಂ ಸಂಸ್ಥಾಪ್ಯ ತತ್ತೀರೇ ಜಗಾಮ ನೃಪತಿಂ ಪ್ರತಿ ।
ದೃಷ್ಟ್ವಾ ಸ ವ್ರತಿನಂ ಭೂಪಂ ಪಪ್ರಚ್ಛ ವಿನಯಾನ್ವಿತಃ ॥ ೫ ॥

ಕೊಂಡಂಥವನೂ, ಮತ್ತು ಸತ್ಯವಾದ ಮಾತುಗಳನ್ನು ಆಡುವವನೂ ಆದ ಆ ರಾಜನು ನಿತ್ಯವೂ ದೇವಾಲಯಕ್ಕೆ ಹೋಗಿ, ಅಲ್ಲಿರುವಂಥ ಬ್ರಾಹ್ಮಣರಿಗೆ ದ್ರವ್ಯದಾನವನ್ನು ಕೊಟ್ಟು, ಅವರನ್ನು ಸಂತೋಷಪಡಿಸುತ್ತಿದ್ದನು. ॥ ೨ ॥ ಈ ಉಲ್ಕಾಮುಖ ರಾಜನು ಕಮಲದಂತೆ ಮುಖವುಳ್ಳ "ಪ್ರಮುಗ್ಧಾ" ಎಂಬ ತನ್ನ ಹೆಂಡತಿಯಿಂದ ಕೂಡಿಕೊಂಡು "ಭದ್ರಶೀಲಾ" ಎಂಬ ನದಿಯ ದಂಡೆಯಲ್ಲಿ ಶ್ರೀ ಸತ್ಯನಾರಾಯಣನ ವ್ರತವನ್ನು ಮಾಡುತ್ತಿದ್ದನು. ॥೩॥ ಅದೇ ಸಮಯದಲ್ಲಿ ಒಬ್ಬ ಸಾಧುವು ನಾವಿನಲ್ಲಿ ಬಹಳ ದ್ರವ್ಯವನ್ನು ತುಂಬಿ, ವ್ಯಾಪಾರಕ್ಕಾಗಿ ಬಂದು, ಅಲ್ಲಿಯೇ ನದಿಯ ದಂಡೆಯಲ್ಲಿ ವ್ರತವನ್ನು ಮಾಡುತ್ತ ಕುಳಿತಿರುವ ರಾಜನನ್ನು ನೋಡಿ, ತನ್ನ ನಾವನ್ನು ಅಲ್ಲಿಯೇ ನಿಲ್ಲಿಸಿ, ತಾನು ರಾಜನ ಕಡೆಗೆ ಹೋಗಿ, ಆತನಿಗೆ ನಮಸ್ಕರಿಸಿ, ವಿನಯದಿಂದ ಪ್ರಶ್ನೆ ಮಾಡಿದನು. ॥ ೪ ॥ ೫ ॥ ಏನೆಂದರೆ— ರಾಜನೇ, ಇಂಥ

ಸಾಧುರುವಾಚ—

ಕಿಮಿದಂ ಕುರುಷೇ ರಾಜನ್ ಭಕ್ತಿಯುಕ್ತೇನ ಚೇತಸಾ ।
ಪ್ರಕಾಶಂ ಕುರು ತತ್ಸರ್ವಂ ಶ್ರೋತುಮಿಚ್ಛಾಮಿ ಸಾಂಪ್ರತಂ ॥ ೬॥

ರಾಜೋವಾಚ—

ಪೂಜನಂ ಕ್ರಿಯತೇ ಸಾಧೋ ವಿಷ್ಣೋರತುಲತೇಜಸಃ ।
ವ್ರತಂ ಚ ಸ್ವಜನೈಃ ಸಾರ್ಧಂ ಪುತ್ರಾದ್ಯಾವಾಪ್ತಿಕಾಮ್ಯಯಾ ॥ ೭ ॥
ಭೂಪಸ್ಯ ವಚನಂ ಶ್ರುತ್ವಾ ಸಾಧುಃ ಪ್ರೋವಾಚ ಸಾದರಂ ।
ಸರ್ವಂ ಕಥಯ ಮೇ ರಾಜನ್ ಕರಿಷ್ಯೇಽಹಂ ತವೋದಿತಂ ॥ ೮ ॥
ಮಮಾಪಿ ಸಂತತಿರ್ನಾಸ್ತಿ ಹ್ಯೇತಸ್ಮಾಜ್ಜಾಯತೇ ಧ್ರುವಂ ।
ತತೋ ನಿವೃತ್ತ್ಯ ವಾಣಿಜ್ಯಾತ್ ಸಾನಂದೋ ಗೃಹಮಾಗತಃ ॥ ೯ ॥

ಭಕ್ತಿಯುಕ್ತವಾದ ಮನಸ್ಸಿನಿಂದ ನೀನು ಏನು ಮಾಡುವಿ ? ಇದನ್ನು ಕೇಳುವದಕ್ಕಾಗಿ ಇಚ್ಛಿಸಿರುತ್ತೇನೆ. ನನ್ನ ಮುಂದೆ ಹೇಳೆನ್ನಲು ॥೬॥ ರಾಜನು— ಎಲೋ ಸಾಧೋ, ನಾನು ಪೂರ್ಣೈಶ್ವರ್ಯಾದಿ ಷಡ್ಗುಣಪೂರ್ಣನಾದ ಶ್ರೀಸತ್ಯ-ನಾರಾಯಣನನ್ನು ಸಂತಾನಾದಿ ಐಶ್ವರ್ಯಪ್ರಾಪ್ತಿ ಕಾಮನೆಯಿಂದ ಪೂಜಿಸುತ್ತಿರುವೆನು. ॥ ೭ ॥ ಆ ಮಾತು ಕೇಳಿ, ಸಾಧುವು— ಎಲೋ ರಾಜನ್ ! ಈ ವ್ರತವನ್ನು ಹೇಗೆ ಮಾಡಬೇಕೆಂಬುದನ್ನು ಸವಿಸ್ತಾರವಾಗಿ ನನ್ನ ಮುಂದೆ ಹೇಳು. ನನಗಾದರೂ ಸಂತತಿ ಇಲ್ಲ. ಈ ವ್ರತದಿಂದ ಸಂತತಿ-ಯಾಗತಕ್ಕದ್ದು ನಿಜವಾದರೆ, ನಾನಾದರೂ ಈ ವ್ರತವನ್ನು ಮಾಡುತ್ತೇನೆಂದು ಹೇಳಿ, ರಾಜನ ಮುಖದಿಂದ ವ್ರತದ ವಿಧಾನವನ್ನೆಲ್ಲ ಸವಿಸ್ತಾರವಾಗಿ ತಿಳಿದುಕೊಂಡು ಕೂಡಲೇ ಸಂತೋಷದಿಂದ ವ್ಯಾಪಾರವನ್ನು ಬಿಟ್ಟು 'ಹೊರಟು ತನ್ನ

ಭಾರ್ಯಾಯೈ ಕಥಿತಂ ಸರ್ವಂ ವ್ರತಂ ಸಂತತಿದಾಯಕಂ ।
ತದಾ ವ್ರತಂ ಕರಿಷ್ಯಾಮಿ ಯದಾ ಮೇ ಸಂತತಿರ್ಭವೇತ್ ॥ ೧೦ ॥
ಇತಿ ಲೀಲಾವತೀಂ ಪ್ರಾಹ ಪತ್ನೀಂ ಸಾಧುಃ ಸ ಸತ್ತಮಃ ।
ಏಕಸ್ಮಿನ್ ದಿವಸೇ ತಸ್ಯ ಭಾರ್ಯಾ ಲೀಲಾವತೀ ಸತೀ ॥ ೧೧ ॥
ಭರ್ತೃಯುಕ್ತಾನಂದಚಿತ್ತಾ ಭವದ್ಧರ್ಮಪರಾಯಣಾ ।
ಗರ್ಭಿಣೀ ಸಾ ಭವತ್ತಸ್ಯ ಭಾರ್ಯಾ ಸತ್ಯಪ್ರಸಾದತಃ ॥ ೧೨ ॥
ದಶಮೇ ಮಾಸಿ ವೈ ತಸ್ಯಾಃ ಕನ್ಯಾರತ್ನಮಜಾಯತ ।
ದಿನೇ ದಿನೇ ಸಾ ವವೃಧೇ ಶುಕ್ಲಪಕ್ಷೇ ಯಥಾ ಶಶೀ ॥ ೧೩ ॥
ನಾಮ್ನಾ ಕಲಾವತೀ ಚೇತಿ ತನ್ನಾಮಕರಣಂ ಕೃತಂ ।
ತತೋ ಲೀಲಾವತೀ ಪ್ರಾಹ ಸ್ವಾಮಿನಂ ಮಧುರಂ ವಚಃ ॥ ೧೪ ॥

ಮನೆಗೆ ಬಂದು ॥ ೮ ॥ ೯ ॥ ತನ್ನ ಹೆಂಡತಿಯ ಮುಂದೆ ಸಂತತಿಯನ್ನು ಕೊಡುವಂಥ ಆ ವ್ರತವನ್ನು ತಿಳುಹಿಸಿ— "ಸ್ತ್ರೀಯೇ ನನಗೆ ಸಂತತಿಯಾದ ನಂತರ ನಾನಾದರೂ ಈ ವ್ರತವನ್ನು ಮಾಡುವೆನು" ಎಂದು ಹೇಳಿ ಹೋದನಂತರ ಆತನ ಹೆಂಡತಿಯಾದ ಲೀಲಾವತಿಯು ॥ ೧೦ ॥ ೧೧ ॥ ಒಂದು ದಿನ ಪತಿಯಿಂದ ಕೂಡಿಕೊಂಡು ಸಂತೋಷದಿಂದ ಇರುತ್ತಿರಲು, ಶ್ರೀ ಸತ್ಯನಾರಾಯಣನ ಅನುಗ್ರಹದಿಂದ ಗರ್ಭಿಣಿಯಾದಳು. ॥ ೧೨ ॥ ಹತ್ತನೆ ತಿಂಗಳು ಬರಲು ಕನ್ಯಾರತ್ನವು ಹುಟ್ಟಿತು. ಆ ಕನ್ನಿಕೆಯು ಶುಕ್ಲಪಕ್ಷದ ಚಂದ್ರಮನಂತೆ ಬೆಳೆದಳು. ॥ ೧೩ ॥ ಆ ಕನ್ನಿಕೆಗೆ "ಕಲಾವತಿ" ಎಂದು ಹೆಸರಿಟ್ಟರು. ಕೆಲವು ದಿವಸಗಳು ಹೋದನಂತರ ಲೀಲಾವತಿಯು ತನ್ನ ಪತಿಯನ್ನು ಕುರಿತು ಸ್ವಾಮಿಯೇ! ನೀವು

ನ ಕರೋಷಿ ಕಿಮರ್ಥಂ ವೈ ಪುರಾ ಸಂಕಲ್ಪಿತಂ ವ್ರತಂ ।

ಸಾಧುರುವಾಚ—

ವಿವಾಹ ಸಮಯೇ ತಸ್ಯಾಃ ಕರಿಷ್ಯಾಮಿ ವ್ರತಂ ಪ್ರಿಯೇ ॥ ೧೫ ॥

ಇತಿ ಭಾರ್ಯಾಂ ಸಮಾಶ್ವಾಸ್ಯ ಜಗಾಮ ನಗರಂ ಪ್ರತಿ ।

ತತಃ ಕಲಾವತೀ ಕನ್ಯಾ ವವೃಧೇ ಪಿತೃವೇಶ್ಮನಿ ॥ ೧೬ ॥

ದೃಷ್ಟ್ವಾ ಕನ್ಯಾಂ ತತಃ ಸಾಧುರ್ನಗರೇ ಸಖಿಭಿಃ ಸಹ ।

ಮಂತ್ರಯಿತ್ವಾದ್ರುತಂ ದೂತಂ ಪ್ರೇಷಯಾಮಾಸ ಧರ್ಮವಿತ್ ॥ ೧೭ ॥

ಪೂರ್ವದಲ್ಲಿ ಸಂಕಲ್ಪಿಸಿದಂಥ ವ್ರತವನ್ನು ಮಗಳು ಹುಟ್ಟಿ ಇಷ್ಟು ದೊಡ್ಡವಳಾದರೂ ಇನ್ನೂವರೆಗೆ ಮಾಡದಿರುವ ಕಾರಣವೇನೆಂದು ಕೇಳಲು, ಆ ಮಾತಿಗೆ ಸಾಧುವು— ಸ್ತ್ರೀಯೇ, ಈ ನನ್ನ ಮಗಳ ಲಗ್ನದ ಕಾಲಕ್ಕೆ ಆ ವ್ರತವನ್ನು ನಾನು ಮಾಡುವೆನೆಂದು ಹೇಳಿದನು. ॥ ೧೪ ॥ ೧೫ ॥ ಹೀಗೆ ಹೆಂಡತಿಯನ್ನು ಸಮಾಧಾನ ಮಾಡಿ, ತಾನು ತನ್ನ ಕಾರ್ಯದ ಮೂಲಕ ಪರಊರಿಗೆ ಹೋದನು. ಕಲಾವತಿಯೆಂಬ ಕನ್ನಿಕೆಯಾದರೂ ತನ್ನ ತಂದೆಯ ಮನೆಯಲ್ಲಿ ದಿನೇ ದಿನೇ ಬೆಳೆಯಹತ್ತಿದಳು. ॥ ೧೬ ॥ ಒಂದು ದಿವಸ ಸಾಧುವು ಊರಿನಲ್ಲಿ ತನ್ನ ಗೆಳತಿಯರಿಂದ ಕೂಡಿ ಆಡುತ್ತಿರುವಂಥ ತನ್ನ ಮಗಳನ್ನು ನೋಡಿ, ಇನ್ನು ನನ್ನ ಮಗಳು ಲಗ್ನಕ್ಕೆ ಯೋಗ್ಯಳಾಗಿರುವಳೆಂದು ವಿಚಾರಿಸಿ, ಕೂಡಲೇ ಒಬ್ಬ ದೂತನನ್ನು ಕರೆದು, "ನನ್ನ ಮಗಳ ಲಗ್ನಕ್ಕಾಗಿ ಯೋಗ್ಯವಾದ ಉತ್ತಮವಾದ ವರನನ್ನು ವಿಚಾರಿಸಿಕೊಂಡು ಬಾ" ಎಂದು

ವಿವಾಹಾರ್ಥೇ ಚ ಕನ್ಯಾಯಾ ವರಂ ಶ್ರೇಷ್ಠಂ ವಿಚಾರಯ ।
ತೇನಾಜ್ಞಪ್ತಶ್ಚ ದೂತೋಽಸೌ ಕಾಂಚನಂ ನಗರಂ ಯಯೌ ॥ ೧೮ ॥
ತಸ್ಮಾದೇಕಂ ವಣಿಕ್ಪುತ್ರಂ ಸಮಾದಾಯಾಽಽಗತೋ ಹಿ ಸಃ ।
ದೃಷ್ಟ್ವಾ ತು ಸುಂದರಂ ಬಾಲಂ ವಣಿಕ್ಪುತ್ರಂ ಗುಣಾನ್ವಿತಂ ॥ ೧೯ ॥
ಜ್ಞಾತಿಭಿರ್ಬಂಧುಭಿಃ ಸಾರ್ಧಂ ಪರಿತುಷ್ಟೇನ ಚೇತಸಾ ।
ದತ್ತವಾನ್ ಸಾಧುಪುತ್ರಾಯ ಕನ್ಯಾಂ ವಿಧಿವಿಧಾನತಃ ॥ ೨೦ ॥
ತತೋ ಭಾಗ್ಯವಶಾತ್ತೇನ ವಿಸ್ಮೃತಂ ವ್ರತಮುತ್ತಮಂ ।
ವಿವಾಹಸಮಯೇ ತಸ್ಯಾಸ್ತೇನ ರುಷ್ಟೋಽಭವತ್ಪ್ರಭುಃ ॥ ೨೧ ॥

ಆಜ್ಞಾಪಿಸಲು, ಸಾಧುವಿನಿಂದ ಆಜ್ಞಪ್ತನಾದ ದೂತನು ಅಲೆಯುತ್ತ ಅಲೆಯುತ್ತ ಕಾಂಚನವೆಂಬ ಪಟ್ಟಣಕ್ಕೆ ಹೋದನು. ॥೧೭ ॥೧೮ ॥ ಅಲ್ಲಿ ಒಬ್ಬ ವೈಶ್ಯನ ಮಗನನ್ನು ನೋಡಿ, ಆತನನ್ನು ಕರೆದುಕೊಂಡು ಬಂದು ಸಾಧುವಿಗೆ ತೋರಿಸಲು, ಸಾಧುವು ಎಲ್ಲ ಗುಣಗಳಿಂದ ಪೂರ್ಣನೂ, ಸುಂದರನೂ ಆದ ಆ ವಣಿಕ್ಪುತ್ರನನ್ನು ನೋಡಿ, ॥೧೯ ॥ ಅತಿ ಸಂತೋಷಯುಕ್ತ ಮನಸ್ಸಿನಿಂದ ತನ್ನ ಜ್ಞಾತಿಗಳಿಂದಲೂ ಮತ್ತೂ ಬಾಂಧವರಿಂದಲೂ ಯುಕ್ತನಾಗಿ ತನ್ನ ಮಗಳನ್ನು ವಿಧ್ಯುಕ್ತ ಮಾರ್ಗದಿಂದ ಆ ವಣಿಕ್ಪುತ್ರನಿಗೆ ವಿವಾಹ ಮಾಡಿಕೊಟ್ಟನು. ॥ ೨೦ ॥ ಮನೆಯಲ್ಲಿ ಭಾಗ್ಯವು ಹೆಚ್ಚಾಗುತ್ತ ನಡೆಯಲು ಆ ಐಶ್ವರ್ಯದ ಮದದಿಂದ ಸಾಧುವು ಮಗಳ ವಿವಾಹಕಾಲದಲ್ಲಿಯೂ ಸಹ ಶ್ರೀ ಸತ್ಯನಾರಾಯಣನ ವ್ರತವನ್ನು ಮರೆತುಬಿಟ್ಟನು. ಆದರಿಂದ ಶ್ರೀಸತ್ಯನಾರಾಯಣನಿಗೆ ಸಿಟ್ಟು ಬಂದಿತು. ॥ ೨೧ ॥ ಮುಂದೆ ಕೆಲವು ಕಾಲದ

ತತಃ ಕಾಲೇನ ನಿಯತೋ ನಿಜಕರ್ಮವಿಶಾರದಃ ।
ವಾಣಿಜ್ಯಾರ್ಥಂಗತಃ ಶೀಘ್ರಂ ಜಾಮಾತೃಸಹಿತೋವಣಿಕ್ ॥ ೨೨ ॥
ರತ್ನಸಾರಪುರೇ ರಮ್ಯೇ ಗತ್ವಾ ಸಿಂಧುಸಮೀಪತಃ ।
ವಾಣಿಜ್ಯಮಕರೋತ್ ಸಾಧುರ್ಜಾಮಾತ್ರಾ ಶ್ರೀಮತಾ ಸಹ ॥ ೨೩ ॥
ತೌ ತತೋ ನಗರೇ ರಮ್ಯೇ ಚಂದ್ರಕೇತೋರ್ನೃಪಸ್ಯ ಚ ।
ಏತಸ್ಮಿನ್ನೇವ ಕಾಲೇ ತು ಸತ್ಯನಾರಾಯಣಃ ಪ್ರಭುಃ ॥ ೨೪ ॥
ಭ್ರಷ್ಟಪ್ರತಿಜ್ಞಮಾಲೋಕ್ಯ ಶಾಪಂ ತಸ್ಮೈ ಪ್ರದತ್ತವಾನ್ ।
ದಾರುಣಂ ಕಠಿಣಂ ಚಾಸ್ಯ ಮಹದ್ದುಃಖಂ ಭವಿಷ್ಯತಿ ॥ ೨೫ ॥

ನಂತರ ತನ್ನ ವ್ಯವಹಾರ ಕಾರ್ಯದಲ್ಲಿ ಅತಿ ಕುಶಲನಾದ ಸಾಧುವು ವ್ಯಾಪಾರ ಮಾಡುವದಕ್ಕಾಗಿ ತನ್ನ ಅಳಿಯನಿಂದ ಕೂಡಿ, ॥ ೨೨ ॥ ಸಮುದ್ರ ತೀರದಲ್ಲಿರುವ ರತ್ನಸಾರ ಪಟ್ಟಣದಲ್ಲಿ ಹೋಗಿ, ಕೆಲವು ದಿನಗಳವರೆಗೆ ವ್ಯಾಪಾರವನ್ನು ಮಾಡಿದನು. ॥ ೨೩ ॥ ಆಮೇಲೆ ಸಾಧುವು ಮತ್ತು ಅವನ ಅಳಿಯನು ಹೀಗೆ ಅವರಿಬ್ಬರೂ ಅಲ್ಲಿಂದ ಹೊರಟು, ಅತಿ ಮನೋಹರವಾದ ಚಂದ್ರಕೇತು ಎಂಬ ರಾಜನ ರಾಜಧಾನಿಯಲ್ಲಿ ವ್ಯಾಪಾರಾರ್ಥವಾಗಿ ಬಂದರು. ಅಷ್ಟರಲ್ಲಿ ಸಮರ್ಥನಾದ ಶ್ರೀ ಸತ್ಯನಾರಾಯಣನು ॥ ೨೪ ॥ ತನ್ನ ಉದ್ದಿಶ್ಯ ವ್ರತವನ್ನು ಮಾಡುವದಾಗಿ ನಿಶ್ಚಯಿಸಿದ್ದು, ಈ ವರೆಗೂ ವ್ರತವನ್ನು ಮಾಡದೇ ಇರುವವದರಿಂದ ತನ್ನ ಮಹಾತ್ಮೆಯನ್ನು ತೋರಿಸುವದಕ್ಕೋಸ್ಕರ ಸಾಧುವೇ! ನೀನು ಪ್ರತಿಜ್ಞಾಭ್ರಷ್ಟನಾದ ಪ್ರಯುಕ್ತ ಅತಿ ಭಯಂಕರವಾದ ಮತ್ತು ಕಠಿಣವಾಗಿಯೂ ಇದ್ದ ದುಃಖ ಸಮುದ್ರದಲ್ಲಿ

ಏಕಸ್ಮಿನ್ ದಿವಸೇ ರಾಜ್ಞೋ ಧನಮಾದಾಯ ತಸ್ಕರಃ ।
ತತ್ರೈವ ಜಾಗತಶ್ಚೋರೋ ವಣಿಜೌ ಯತ್ರ ಸಂಸ್ಥಿತೌ ॥ ೨೬ ॥
ತತ್ಪಶ್ಚಾದ್ಧಾವಕಾನ್ ದೂತಾನ್ ದೃಷ್ಟ್ವಾ ಭೀತೇನ ಚೇತಸಾ ।
ಧನಂ ಸಂಸ್ಥಾಪ್ಯ ತತ್ರೈವ ಸ ತು ಶೀಘ್ರಮಲಕ್ಷಿತಃ ॥ ೨೭ ॥
ತತೋ ದೂತಾಃ ಸಮಾಯಾತಾ ಯತ್ರಾಸ್ತೇ ಸಜ್ಜನೋವಣಿಕ್ ।
ದೃಷ್ಟ್ವಾ ನೃಪಧನಂ ತತ್ರ ಬಧ್ವಾ ನೀತೌ ವಣಿಕ್ಸುತೌ ॥ ೨೮ ॥
ಹರ್ಷೇಣ ಧಾವಮಾನಾಶ್ಚ ಊಚುರ್ನೃಪಸಮೀಪತಃ ।

ಜೀಳೆಂದು ಶಾಪ ಕೊಟ್ಟನು. ॥ ೨೫ ॥ ಮುಂದೆ ಕೆಲವು ದಿವಸಗಳ ನಂತರ ಒಂದು ದಿನ ಚಂದ್ರಕೇತು ರಾಜನ ದ್ರವ್ಯವನ್ನು ಒಬ್ಬ ತುಡುಗನು ಕಳುವಿನಿಂದ ತೆಗೆದುಕೊಂಡು, ಸಾಧುವು ಮತ್ತು ಸಾಧುವಿನ ಅಳಿಯನು ಇಬ್ಬರೂ ಕುಳಿತಿರುವ ಸ್ಥಳದಲ್ಲಿಯೇ ಬಂದನು. ॥ ೨೬ ॥ ಅಷ್ಟರಲ್ಲಿ ಆ ಕಳ್ಳನನ್ನು ಹಿಡಿಯುವದಕ್ಕಾಗಿ ಅವನ ಹಿಂದಿನಿಂದಲೇ ರಾಜಭೃತ್ಯರು ಓಡುತ್ತ ಓಡುತ್ತ ಬರುತ್ತಿರಲು ಆ ತುಡುಗನು ಅಂಜಿ ಆ ರಾಜದ್ರವ್ಯವನ್ನು ಅಲ್ಲಿಯೇ ಇಟ್ಟು ತಾನು ಶೀಘ್ರವಾಗಿ ಅಡಗಿಕೊಂಡನು. ॥ ೨೭ ॥ ರಾಜಭಟರು ಸಾಧುವಿದ್ದ ಸ್ಥಳದಲ್ಲಿ ಬಂದು ಅವರ ಸಮೀಪದಲ್ಲಿಯೇ ಇಟ್ಟಿರುವಂಥ ರಾಜದ್ರವ್ಯವನ್ನು ನೋಡಿ, ಇವರೇ ತುಡುಗರೆಂದು ತಿಳಿದು ಕೂಡಲೇ ಆ ಇಬ್ಬರನ್ನೂ ಅಂದರೆ ಸಾಧುವನ್ನು ಮತ್ತು ಆತನ ಅಳಿಯನನ್ನೂ ಸೆರೆಹಿಡಿದು ರಾಜನ ಹತ್ತಿರ ಒಯ್ದು, ॥ ೨೮ ॥ ಸಂತೋಷದಿಂದ ರಾಜನೇ, ಇಬ್ಬರೂ ತುಡುಗರನ್ನು ಹಿಡಿದು ತಂದಿರುವೆವು. ಇವರಿಗೆ ಯಾವ ಶಿಕ್ಷೆಯನ್ನು

ತಸ್ಕರೌ ದ್ವೌ ಸಮಾನೀತೌ ವಿಲೋಕ್ಯಾಜ್ಞಾಪಯ ಪ್ರಭೋ ॥ ೨೯ ॥
ರಾಜ್ಞಾಜ್ಞಪ್ತಾಸ್ತತಃ ಶೀಘ್ರಂ ದೃಢಂ ಬಧ್ವಾ ತು ತಾವುಭೌ ।
ಸ್ಥಾಪಿತೌ ದ್ವೌ ಮಹಾದುರ್ಗೇ ಕಾರಾಗಾರೇಽವಿಚಾರತಃ ॥ ೩೦ ॥
ಮಾಯಯಾ ಸತ್ಯದೇವಸ್ಯ ನ ಶ್ರುತಂ ಕೈಸ್ತಯೋರ್ವಚಃ ।
ಅತಸ್ತಯೋರ್ಧನಂ ರಾಜ್ಞಾ ಗೃಹೀತಂ ಚಂದ್ರಕೇತುನಾ ॥ ೩೧ ॥
ತಚ್ಛಾಪಾಚ್ಚ ತಯೋರ್ಗೇಹೇ ಭಾರ್ಯಾ ಚೈವಾತಿದುಃಖಿತಾ ।
ಚೋರೇಣಾಪಹೃತಂ ಸರ್ವಂ ಗೃಹೇ ಯಚ್ಚ ಸ್ಥಿತಂ ಧನಂ ॥ ೩೨ ॥

ಮಾಡಬೇಕೆಂಬುದಾಗಿ ಚನ್ನಾಗಿ ವಿಚಾರಿಸಿ ನೋಡಿ, ನಮಗೆ ಅಪ್ಪಣೆಯನ್ನು ಕೊಡಬೇಕೆಂದು ಪ್ರಾರ್ಥಿಸಿದರು. ॥ ೨೯ ॥ ಬಳಿಕ ಅವರ ವಿಷಯಕ್ಕೆ ಏನೂ ವಿಚಾರ ಮಾಡದಲೇ ರಾಜಾಜ್ಞೆಯ ಮೇರೆಗೆ ಆ ಇಬ್ಬರನ್ನೂ ಮಹಾ ಕಠಿಣವಾದ ದುರ್ಗದಲ್ಲಿರುವ ಒಂದು ಬಂದೀಖಾನೆಯಲ್ಲಿ ಒಯ್ದಿಟ್ಟರು. ॥ ೩೦ ॥ ಅಳಿಯನಿಂದ ಯುಕ್ತನಾದ ಸಾಧುವು ತಾವು ತುಡುಗರಲ್ಲವೆಂದು ರಾಜನಿಗೆ ಎಷ್ಟು ಹೇಳಿಕೊಂಡರೂ ಶ್ರೀಸತ್ಯನಾರಾಯಣನ ಮಾಯೆಯಿಂದ ಆತನ ಕಡೆಗೆ ಯಾರೂ ಲಕ್ಷ್ಯವನ್ನು ಕೊಡಲಿಲ್ಲ. ಮತ್ತು ಅವರ ದ್ರವ್ಯವನ್ನು ಸಹ ಚಂದ್ರಕೇತು ರಾಜನು ತನ್ನ ಖಜಾನೆಯಲ್ಲಿ ಹಾಕಿಕೊಂಡನು. ॥ ೩೧ ॥ ಶ್ರೀಸತ್ಯನಾರಾಯಣನು ಅವಕೃಪೆ ಮಾಡೋಣದರಿಂದ ಮನೆಯಲ್ಲಿ ಆತನ ಹೆಂಡತಿ ಮತ್ತು ಮಗಳು ದುಃಖದಲ್ಲಿ ಮುಳುಗಿದರು. ಮನೆಯಲ್ಲಿದ್ದ ಐಶ್ವರ್ಯವನ್ನೆಲ್ಲ ತುಡುಗರು ಅಪಹರಿಸಿಕೊಂಡು ಹೋದರು. ॥ ೩೨ ॥ ಆದ್ದರಿಂದ ಸಾಧುವಿನ ಹೆಂಡತಿಯು

ಆಧಿವ್ಯಾಧಿ ಸಮಾಯುಕ್ತಾ ಕ್ಷುತ್ಪಿಪಾಸಾದಿ ದುಃಖಿತಾ ।
ಅನ್ನಚಿಂತಾಪರಾಭೂತ್ವಾ ಬಭ್ರಾಮ ಚ ಗೃಹೇ ಗೃಹೇ ।
ಕಲಾವತೀ ತು ಕನ್ಯಾಪಿ ಬಭ್ರಾಮ ಪ್ರತಿವಾಸರಂ ॥ ೩೩ ॥
ಏಕಸ್ಮಿನ್ ದಿವಸೇ ಜಾತಾ ಕ್ಷುಧಾರ್ತಾ ದ್ವಿಜಮಂದಿರಂ ।
ಗತ್ವಾ ಪಶ್ಯದ್ವ್ರತಂ ತತ್ರ ಸತ್ಯನಾರಾಯಣಸ್ಯ ಚ ॥ ೩೪ ॥
ಉಪವಿಶ್ಯ ಕಥಾಂ ಶ್ರುತ್ವಾ ವರಂ ಪ್ರಾರ್ಥಿತವತ್ಯಪಿ ।
ಪ್ರಸಾದಭಕ್ಷಣಂ ಕೃತ್ವಾ ಯಯೌ ರಾತ್ರೌ ಗೃಹಂ ಪ್ರತಿ ॥ ೩೫ ॥

ಮನಸ್ತಾಪದಿಂದಲೂ, ಮೈಯಲ್ಲಿ ನೆಟ್ಟಗಿಲ್ಲದ್ದರಿಂದಲೂ, ದ್ರವ್ಯವೆಲ್ಲಾ ಕಳುವಿನಿಂದ ಹೋದಪ್ರಯುಕ್ತ ವೇಳೆಗೆ ಅನ್ನವೂ ಸಹ ಸಿಗದಂತಾಗಲು ಹಸಿವೆ-ನೀರಡಿಕೆಗಳಿಂದ ಪೀಡಿತಳಾಗಿ, ಇನ್ನು ನನಗೆ ಅನ್ನವಾದರೂ ಹೇಗೆ ಸಿಕ್ಕೀತೆಂದು ಮನೆ-ಮನೆಗಳಲ್ಲಿ ಭಿಕ್ಷೆಬೇಡುತ್ತಿದ್ದಳು. ಕಲಾವತಿ ಎಂಬ ಮಗಳಾದರೂ ನಿತ್ಯದಲ್ಲಿ ಭಿಕ್ಷಾರ್ಥವಾಗಿ ಮನೆ-ಮನೆ ತಿರುಗಹತ್ತಿದಳು. ॥ ೩೩ ॥ ಒಂದು ದಿನ ಕಲಾವತಿಯು ತನಗೆ ಹಸಿವು ಬಹಳೇ ಆದ ಪ್ರಯುಕ್ತ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಹೋಗಿ, ಅಲ್ಲಿ ಆ ಬ್ರಾಹ್ಮಣನು ಮಾಡುತ್ತಿರುವ ಶ್ರೀ ಸತ್ಯನಾರಾಯಣನ ವ್ರತವನ್ನು ನೋಡಿ, ॥ ೩೪ ॥ ಅಲ್ಲಿಯೇ ಸ್ವಲ್ಪ ಹೊತ್ತು ಕುಳಿತು, ಕಥೆಯನ್ನು ಕೇಳಿ, ಶ್ರೀ ಸತ್ಯನಾರಾಯಣನನ್ನು ಮನಸ್ಸಿನಿಂದ ಪ್ರಾರ್ಥಿಸಿ, ಪ್ರಸಾದವನ್ನು ತಿಂದು ರಾತ್ರಿಯು ಬಹಳೇ ಆದ ಪ್ರಯುಕ್ತ ಹೊರಟು ತನ್ನ ಮನೆಗೆ ಬಂದಳು. ॥ ೩೫ ॥ ಆಗ್ಗ

ಮಾತಾ ಕಲಾವತೀಂ ಕನ್ಯಾಂ ಕಥಯಾಮಾಸ ಪ್ರೇಮತಃ ।
ಪುತ್ರಿ ರಾತ್ರೌ ಸ್ಥಿತಾ ಕುತ್ರ ಕಿಂ ತೇ ಮನಸಿ ವರ್ತತೇ ॥ ೩೬ ॥
ಕನ್ಯಾ ಕಲಾವತೀ ಪ್ರಾಹ ಮಾತರಂ ಪ್ರತಿ ಸತ್ವರಂ ।
ದ್ವಿಜಾಲಯೇ ವ್ರತಂ ಮಾತರ್ದೃಷ್ಟಂ ವಾಂಛಿತಸಿದ್ಧಿದಂ ॥ ೩೭ ॥
ತಚ್ಛ್ರುತ್ವಾ ಕನ್ಯಕಾ ವಾಕ್ಯಂ ವ್ರತಂ ಕರ್ತುಂ ಸಮುದ್ಯತಾ ।
ಸಾ ಮುದಾ ತು ವಣಿಗ್ಭಾರ್ಯಾ ಸತ್ಯನಾರಾಯಣಸ್ಯ ಚ ॥ ೩೮ ॥
ವ್ರತಂ ಚಕ್ರೇ ಸೈವ ಸಾಧ್ವೀ ಬಂಧುಭಿಃ ಸ್ವಜನೈಃ ಸಹ ।
ಭರ್ತೃಜಾಮಾತರೌ ಕ್ಷಿಪ್ರಮಾಗಚ್ಛೇತಾಂ ಸ್ವಮಾಶ್ರಮಂ ॥ ೩೯ ॥

ಲೀಲಾವತಿಯು ಮಗಳನ್ನು ನೋಡಿ, ಪ್ರೇಮದಿಂದ ಮಗಳೇ, ಇಷ್ಟು ರಾತ್ರಿಯಾಗುವವರೆಗೆ ನೀನು ಎಲ್ಲಿ ಕುಳಿತಿದ್ದಿ ? ನಿನ್ನ ಮನಸ್ಸಿನಲ್ಲೇನಿರುವದೆಂದು ಕೇಳಲು, ॥ ೩೬ ॥ ಆ ಮಾತಿಗೆ ಕಲಾವತಿಯು— ತಾಯೀ, ಒಬ್ಬ ಬ್ರಾಹ್ಮಣನ ಮನೆಯಲ್ಲಿ ಮನಸ್ಸಿನಲ್ಲಿ ಬೇಡಿದ್ದನ್ನೆಲ್ಲ ಪೂರ್ಣಮಾಡಿಕೊಡುವಂಥ ಒಂದು ವ್ರತವನ್ನು ಮಾಡುತ್ತಿದ್ದರು. ಅದನ್ನು ನಾನು ನೋಡುತ್ತ ಅಲ್ಲಿಯೇ ಸ್ವಲ್ಪ ಹೊತ್ತು ಕುಳಿತುಕೊಂಡಿದ್ದೆನೆನ್ನಲು ॥ ೩೭ ॥ ಆ ಮಾತು ಕೇಳಿ, ಲೀಲಾವತಿಯು ಸಂತೋಷದಿಂದ ತಾನೂ ಬಂಧು-ಬಾಂಧವರಿಂದಲೂ ಮತ್ತು ಜ್ಞಾತಿ ಜನರಿಂದಲೂ ಯುಕ್ತಳಾಗಿ ಭಕ್ತಿಯಿಂದ ಶ್ರೀ ಸತ್ಯನಾರಾಯಣ (ವ್ರತ) ಪೂಜೆಯನ್ನು ಮಾಡಿ, ಸ್ವಾಮಿನ್ ! ಶ್ರೀ ಸತ್ಯನಾರಾಯಣನೇ, ನನ್ನ ಗಂಡನೂ ಮತ್ತು ಅಳಿಯನೂ ಶೀಘ್ರವಾಗಿ ಮನೆಗೆ ಬರಲಿ ॥ ೩೮ ॥ ೩೯ ॥ ನನ್ನ ಗಂಡನೂ ಮತ್ತು ಅಳಿಯನೂ

ಅಪರಾಧಂ ಚ ಮೇ ಭರ್ತುರ್ಜಾಮಾತುಃ ಕ್ಷಂತುಮರ್ಹಸಿ ।
ವ್ರತೇನಾನೇನ ತುಷ್ಟೋಽಸೌ ಸತ್ಯನಾರಾಯಣಃ ಪ್ರಭುಃ ॥ ೪೦ ॥
ದರ್ಶಯಾಮಾಸ ಸ್ವಪ್ನಂ ಹಿ ಚಂದ್ರಕೇತುಂ ನೃಪೋತ್ತಮಂ ।
ಬಂದಿನೌ ಮೋಚಯ ಪ್ರಾತರ್ವಣಿಜೌ ನೃಪಸತ್ತಮ ॥ ೪೧ ॥
ದೇಯಂ ಧನಂ ಚ ತತ್ಸರ್ವಂ ಗೃಹೀತಂ ಯತ್ತ್ವಯಾಽಧುನಾ ।
ನೋ ಚೇತ್ತ್ವಾಂ ನಾಶಯಿಷ್ಯಾಮಿ ಸರಾಜ್ಯಧನಪುತ್ರಕಂ ॥ ೪೨ ॥
ಏವಮಾಭಾಷ್ಯ ರಾಜಾನಂ ಧ್ಯಾನಗಮ್ಯೋಽಭವತ್ಪ್ರಭುಃ ।
ತತಃ ಪ್ರಭಾತಸಮಯೇ ರಾಜಾ ಚ ಸ್ವಜನೈಃ ಸಹ ॥ ೪೩ ॥

ನಿನಗೆ ಮಾಡಿದ ಅಪರಾಧವನ್ನು ಕ್ಷಮಿಸೆಂದು ಬೇಡಿಕೊಂಡಳು. ಲೀಲಾವತಿಯು ಮಾಡಿದ ವ್ರತದಿಂದ ಸಂತುಷ್ಟನಾದ ಶ್ರೀ ಸತ್ಯನಾರಾಯಣನು ॥ ೪೦ ॥ ಕೂಡಲೇ ಚಂದ್ರಕೇತು ರಾಜನ ಸ್ವಪ್ನದಲ್ಲಿ ಹೋಗಿ, ರಾಜನೇ— ನೀನು ಕಾರಾಗ್ರಹದಲ್ಲಿಟ್ಟ ಇಬ್ಬರು ಬಣಜಿಗರನ್ನು ಪ್ರಾತಃಕಾಲವಾದ ಕೂಡಲೇ ಬಂದಿಯಿಂದ ಮುಕ್ತರನ್ನಾಗಿ ಮಾಡು. ॥ ೪೧ ॥ ನೀನು ತೆಗೆದುಕೊಂಡಂಥ ಅವರ ದ್ರವ್ಯವನ್ನಾದರೂ ಅವರಿಗೆ ಕೊಡು. ಹೀಗೆ ನೀನು ಮಾಡದೇ ಇದ್ದರೆ ರಾಜ್ಯ ಐಶ್ವರ್ಯ ಮಕ್ಕಳುಗಳಿಂದ ಯುಕ್ತನಾದ ನಿನ್ನನ್ನು ನಾನು ನಾಶಮಾಡಿ ಬಿಡುವೆನೆಂದು ॥ ೪೨ ॥ ರಾಜನಿಗೆ ಹೇಳಿ, ಶ್ರೀಸತ್ಯನಾರಾಯಣನು ಅದೃಶ್ಯನಾದನು. ಅನಂತರ ರಾಜನು ಪ್ರಾತಃಕಾಲದಲ್ಲಿ ಎದ್ದು ತನ್ನ ಸ್ವಜನರಿಂದ ಕೂಡಿ ॥ ೪೩ ॥ ಸಭೆಯಲ್ಲಿ ಬಂದು ಎಲ್ಲರಿಗೂ ಸ್ವಪ್ನವನ್ನು ತಿಳುಹಿಸಿ,

ಉಪವಿಶ್ಯ ಸಭಾಮಧ್ಯೇ ಪ್ರಾಹ ಸ್ವಪ್ನಂ ಜನಂ ಪ್ರತಿ ।
ಬದ್ಧೌ ಮಹಾಜನೌ ಶೀಘ್ರಂ ಮೋಚಯ ದ್ವೌ ವಣಿಕ್ಸುತೌ ॥ ೪೪ ॥
ಇತಿ ರಾಜ್ಞೋ ವಚಃ ಶ್ರುತ್ವಾ ಮೋಚಯಿತ್ವಾ ಮಹಾಜನೌ ।
ಸಮಾನೀಯ ನೃಪಸ್ಯಾಗ್ರೇ ಪ್ರಾಹುಸ್ತೇ ವಿನಯಾನ್ವಿತಾಃ ॥ ೪೫ ॥
ಆನೀತೌ ದ್ವೌ ವಣಿಕ್ಪುತ್ರೌ ಮುಕ್ತೌ ನಿಗಡಬಂಧನಾತ್ ।
ತತೋ ಮಹಾಜನೌ ನತ್ವಾ ಚಂದ್ರಕೇತುಂ ನೃಪೋತ್ತಮಂ ॥ ೪೬ ॥
ಸ್ಮರಂತೌ ಪೂರ್ವವೃತ್ತಾಂತಂ ನೋಚತುರ್ಭಯವಿಹ್ವಲೌ ।
ರಾಜಾವಣಿಕ್ಸುತೌ ವೀಕ್ಷ್ಯ ವಚಃ ಪ್ರೋವಾಚ ಸಾದರಂ ॥ ೪೭ ॥

ಕಾರಾಗೃಹದಲ್ಲಿ ಇರುವ ಇಬ್ಬರು ವೈಶ್ಯರನ್ನು ಬಂದಿಯಿಂದ ಮುಕ್ತರನ್ನು ಮಾಡಿರೆಂದು ಭೃತ್ಯರಿಗೆ ಆಜ್ಞಾಪಿಸಲು ॥ ೪೪ ॥ ಕೂಡಲೇ ಅವರು ರಾಜಾಜ್ಞೆಯ ಮೇರೆಗೆ ಆ ಇಬ್ಬರು ವ್ಯಾಪಾರಿಗಳನ್ನು ತಂದು ನಿಲ್ಲಿಸಿ, ಅತಿ ವಿನಯದಿಂದ ॥ ೪೫ ॥ ರಾಜನೇ, ತಮ್ಮ ಅಪ್ಪಣೆಯ ಪ್ರಕಾರ ಇಬ್ಬರು ವ್ಯಾಪಾರಿಗಳನ್ನು ತಂದಿರುತ್ತೇವೆ. ಇವರು ಬಂದಿಯಿಂದ ಮುಕ್ತರಾಗಿರುವರೆಂದು ಹೇಳಿಕೊಂಡರು. ಆ ವ್ಯಾಪಾರಿಗಳಾದರೂ ರಾಜಶ್ರೇಷ್ಠನಾದ ಚಂದ್ರಕೇತುವನ್ನು ನೋಡಿ ಆತನಿಗೆ ನಮಸ್ಕರಿಸಿ, ॥ ೪೬ ॥ ತಮ್ಮ ಹಿಂದಿನ ವೃತ್ತಾಂತವನ್ನೆಲ್ಲ ಸ್ಮರಣ ಮಾಡಿ, ಭಯದಿಂದ ಪುನಃ ಏನೂ ಮಾತುಗಳನ್ನಾಡದೇ ಸುಮ್ಮನೇ ನಿಂತುಕೊಂಡರು. ಬಳಿಕ ರಾಜನು ಆ ಇಬ್ಬರು ವ್ಯಾಪಾರಿಗಳನ್ನು ನೋಡಿ, ಅತ್ಯಾದರದಿಂದ ।೪೭॥ ಏನೋ ನಿಮ್ಮ ದುರ್ದೈವದಿಂದಲೇ

ದೈವಾತ್ಪ್ರಾಪ್ತಂ ಮಹದ್ದುಃಖಮಿದಾನೀಂ ನಾಸ್ತಿ ವೈ ಭಯಂ ।
ತದಾ ನಿಗಡಸಂತ್ಯಾಗಂ ಕ್ಷೌರಕರ್ಮಾದ್ಯಕಾರಯತ್ ॥ ೪೮ ॥
ವಸ್ತ್ರಾಲಂಕಾರಕಂ ದತ್ವಾ ಪರಿತೋಷ್ಯ ನೃಪಶ್ಚ ತೌ ।
ಪುರಸ್ಕೃತ್ಯ ವಣಿಕ್ಪುತ್ರೌ ವಚಸಾ ತೋಷಯದ್ ಭೃಶಂ ॥ ೪೯ ॥
ಪುರಾನೀತಂ ತು ಯದ್ ದ್ರವ್ಯಂ ದ್ವಿಗುಣೀಕೃತ್ಯ ದತ್ತವಾನ್ ।
ಪ್ರೋವಾಚ ತೌ ತತೋ ರಾಜಾ ಗಚ್ಛ ಸಾಧೋನಿಜಾಶ್ರಮಂ ॥ ೫೦ ॥
ರಾಜಾನಂ ಪ್ರಣಿಪತ್ಯಾಹ ಗಂತವ್ಯಂ ತ್ವತ್ಪ್ರಸಾದತಃ ॥ ೫೧ ॥

ಇತಿ ಶ್ರೀ ಸ್ಕಂದಪುರಾಣೇ .... ತೃತೀಯೋಽಧ್ಯಾಯಃ ॥ ೩ ॥

ಇಂಥ ದುಃಖವನ್ನು ನೀವು ಅನುಭವಿಸಬೇಕಾಯಿತಲ್ಲದೇ ಇನ್ನು ಮುಂದೆ ನಿಮಗೆ ಯಾವ ಭಯವೂ ಇಲ್ಲವೆಂದು ಹೇಳಿ, ಅವರಿಬ್ಬರ ಬೇಡಿಗಳನ್ನು ಕಡಿಸಿ, ಕ್ಷೌರಕರ್ಮವನ್ನು ಮಾಡಿಸಿ, ॥ ೪೮ ॥ ವಸ್ತ್ರಾಲಂಕಾರಗಳನ್ನು ಕೊಟ್ಟು, ಸಂತೋಷಪಡಿಸಿ, ಅವರನ್ನು ಪುರಸ್ಕಾರ ಮಾಡಿ, ಒಳ್ಳೆಯ ಮಾತುಗಳಿಂದ ಸಮಾಧಾನ ಮಾಡಿ, ॥ ೪೯ ॥ ತಾನು ತೆಗೆದುಕೊಂಡಂಥ ಅವರ ದ್ರವ್ಯವನ್ನು ಎರಡುಪಟ್ಟಾಗಿ ಮಾಡಿಕೊಟ್ಟು ಸಾಧೋ, ಇನ್ನು ನೀನು ನಿನ್ನ ಮನೆಗೆ ಹೋಗೆಂದು ಹೇಳಲು ॥ ೫೦ ॥ ಸಾಧುವು ರಾಜನಿಗೆ ನಮಸ್ಕರಿಸಿ, ರಾಜನೇ ನಿನ್ನ ಅನುಗ್ರಹದಿಂದ ನಾನು ಹೋಗುವೆನೆಂದು ಹೇಳಿದನು. ॥ ೫೧ ॥

ಹೀಗೆ ಶ್ರೀ ಸ್ಕಂದಪುರಾಣೋಕ್ತ ರೇವಾಖಂಡದಲ್ಲಿ ಹೇಳಿರುವ ಶ್ರೀ ಸತ್ಯನಾರಾಯಣ ಕಥೆಯಲ್ಲಿ ಮೂರನೇ ಅಧ್ಯಾಯವು ಮುಗಿದುದು.

ಸೂತ ಉವಾಚ—

ಯಾತ್ರಾಂ ತು ಕೃತವಾನ್ ಸಾಧುರ್ಮಂಗಲಾಯನಪೂರ್ವಿಕಾಂ ।
ಬ್ರಾಹ್ಮಣಾಯ ಧನಂ ದತ್ವಾ ತದಾ ತು ನಗರಂ ಯಯೌ ॥ ೧ ॥
ಕಿಯದ್ದೂರೇ ಗತೇ ಸಾಧೌ ಸತ್ಯನಾರಾಯಣಃ ಪ್ರಭುಃ ।
ಜಿಜ್ಞಾಸಾಂ ಕೃತವಾನ್ ಸಾಧೋ ಕಿಮಸ್ತಿ ತವ ನೌಸ್ಥಿತಂ ॥ ೨ ॥
ತತೋ ಮಹಾಜನೌ ಮತ್ತೌ ಹೇಲಯಾ ಚ ಪ್ರಹಸ್ಯ ವೈ ।
ಕಥಂ ಪೃಚ್ಛಸಿ ಭೋ ದಂಡಿನ್ ಮುದ್ರಾಂ ನೇತುಂ ಕಿಮಿಚ್ಛಸಿ ॥ ೩ ॥

ಸೂತರು ಅನ್ನುತ್ತಾರೆ— ಅನಂತರ ಸಾಧುವು ತಾನು ತನ್ನ ಊರಿಗೆ ಹೊರಡಬೇಕೆಂದು ಊದಿಸುತ್ತಾ, ಬಾರಿಸುತ್ತಾ ಅತಿ ವೈಭವದಿಂದ ಬ್ರಾಹ್ಮಣನಿಗೆ ದ್ರವ್ಯದಾನ ಕೊಟ್ಟು, ತನ್ನ ಊರಿಗೆ ಹೊರಟನು. ॥ ೧ ॥ ಕೆಲವು ದೂರ ಬಂದು ನಿಂತಿರಲು (ಈತನಿಗೆ ಈಗಲಾದರೂ ಬುದ್ಧಿ ಬಂದಿರುವದೋ ಅಥವಾ ಇಲ್ಲವೋ ಎಂಬುದನ್ನು ಪರೀಕ್ಷಿಸಿ ನೋಡಬೇಕೆಂದು ಯೋಚಿಸಿ, ಕೂಡಲೇ ತ್ರಿದಂಡಿ ಸನ್ಯಾಸಿಯ ವೇಷವನ್ನು ಧರಿಸಿದ) ಸಮರ್ಥನಾದ ಶ್ರೀಸತ್ಯನಾರಾಯಣನು ಸಾಧುವಿನ ಹತ್ತಿರದಲ್ಲಿ ಬಂದು ಸಾಧೋ, ಈ ನಾವಿನಲ್ಲಿ ನೀನು ಏನು ತುಂಬಿರುವಿ? ಹೇಳೆಂದು ಕೇಳಿದನು. ॥ ೨ ॥ ಆ ಮಾತು ಕೇಳಿ, ಮದೋನ್ಮತ್ತರಾದ ಆ ಬಣಜಿಗರು ಸೊಕ್ಕಿನಿಂದ ದೊಡ್ಡ ಧ್ವನಿಯಿಂದ ನಕ್ಕು, ಆ ಸನ್ಯಾಸಿಯನ್ನು ಕುರಿತು— ಎಲೈ ಸನ್ಯಾಸಿಯೇ, ನೀನು ಅದನ್ನೆಲ್ಲ ಕೇಳಿ ಏನು ಮಾಡುವಿ ? (ಹೆಂಡರು ಮಕ್ಕಳುಗಳಿಂದ ಶೂನ್ಯನಾದ ನಿನಗೆ ಇವರಿಂದ ಪ್ರಯೋಜನವಾದರೂ ಏನು?) ಇದರಲ್ಲಿರುವ ಹಣವನ್ನೆಲ್ಲ ಅಪಹರಿಸಬೇಕೆಂದು ಇಚ್ಛಿಸಿರುವಿಯಾ ಹೇಗೆ ? ॥ ೩ ॥ ನಾವು

ಲತಾಪತ್ರಾದಿಕಂ ಚೈವ ವರ್ತತೇ ತರಣೌ ಮಮ ।
ನಿಷ್ಠುರಂ ಚ ವಚಃ ಶ್ರುತ್ವಾ ಸತ್ಯಂ ಭವತು ತೇ ವಚಃ ॥ ೪ ॥
ಏವಮುಕ್ತ್ವಾಗತಃ ಶೀಘ್ರಂ ದಂಡೀ ತಸ್ಯ ಸಮೀಪತಃ ।
ಕಿಯದ್ದೂರೇ ತತೋ ಗತ್ವಾ ಸ್ಥಿತಃ ಸಿಂಧುಸಮೀಪತಃ ॥ ೫ ॥
ಗತೇ ದಂಡಿನಿ ಸಾಧುಶ್ಚ ಕೃತನಿತ್ಯಕ್ರಿಯಸ್ತದಾ ।
ಉತ್ಥಿತಾಂ ತರಣೀಂ ದೃಷ್ಟ್ವಾ ವಿಸ್ಮಯಂ ಪರಮಂ ಯಯೌ ॥ ೬ ॥
ದೃಷ್ಟ್ವಾ ಲತಾದಿಕಂ ಚೈವ ಮೂರ್ಛಿತೋಽನ್ಯಪತದ್ಭುವಿ ।
ಲಬ್ಧಸಂಜ್ಞೋ ವಣಿಕ್ಪುತ್ರಸ್ತತಶ್ಚಿಂತಾನ್ವಿತೋಽಭವತ್ ॥ ೭ ॥

